ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 47 | ನವೆಂಬರ್ 22, 1981 | ಬೆಲೆ : 60 ಪೈಸೆ

ಭೂ (ಅ) ನ್ಯಾಯ ಮಂಡಳಿಗಳು

ಕರ್ನಾಟಕ ರಾಜ್ಯದ ಭೂಸುಧಾರಣಾ ಶಾಸನವನ್ನು ರಾಜ್ಯೋತ್ಸವದ ದಿನದಂದು ಸಂಪೂರ್ಣವಾಗಿ ಜಾರಿಗೆ ತರುತ್ತೇನೆಂದು ಡಂಗುರ ಬಾರಿಸಿದ ರಾಜ್ಯದ ಮುಖ್ಯಮಂತ್ರಿ ಶ್ರೀ ಗುಂಡೂರಾಯರು ಈಗ ಆ ದಿನವನ್ನು ಮುಂದೆ ಹಾಕಿದ್ದಾರೆ. ಇದು ಹಾಗೆನೇ ವರ್ಷವರ್ಷ ಮುಂದೆ ಹೋಗುತ್ತಾ ಇದೆ. ಯಾವಾಗ ಮುಗಿಯುತ್ತೆಂದು ಯಾರಿಂದಲೂ ಹೇಳಲು ಸಾಧ್ಯವಿಲ್ಲ.

ಈ ಸುಧಾರಣೆಯನ್ನು ಜಾರಿಗೆ ತರುವವರು ಭೂನ್ಯಾಯ ಮಂಡಳಿಗಳು. ಈ ಮಂಡಳಿಗಳಲ್ಲಿ ಸಂಘಟಿತ ರೈತ ಪ್ರತಿನಿಧಿಗಳು ಯಾರೂ ಇಲ್ಲ. ಅದರ ಸದಸ್ಯರೆಲ್ಲ ಸರಕಾರದಿಂದ ನಾಮಕರಣ ಮಾಡಲ್ಪಟ್ಟವರು. ಹೆಚ್ಚಿನವರು ಕಾಂಗ್ರೆ ಪುಢಾರಿಗಳು ಮತ್ತು ಭೂಮಾಲೀಕರ ಬಂಟರು. ಈ ಮಂಡಳಿಗಳ ಬಗ್ಗೆ ನಮ್ಮ ಪತ್ರಿಕೆಯಲ್ಲೂ, ಇತರ ಪತ್ರಿಕೆಗಳಲ್ಲೂ ಸಾಕಷ್ಟು ಟೀಕೆಗಳು ಬಂದಿವೆ. ಅಲ್ಲಿ ನಡೆಯುವ ಲಂಚಗುಳಿತನ, ಭ್ರಷ್ಟಾಚಾರ, ಸ್ವಜನಪಕ್ಷಪಾತ ಇದರಿಂದ ರೈತರು ಸಂಪೂರ್ಣ ನಿರಾಶೆಗೊಂಡಿದ್ದಾರೆ.

ಸಂಪಾದಕೀಯ

ಈ ಮಂಡಳಿಗಳಲ್ಲಿ ರೈತರ ಪರವಾಗಿ ತೀರ್ಮಾನವಾಗಿದ್ದರೆ ಆ ಫೈಲುಗಳೇ ನಾಪತ್ತೆಯಾಗಿರುವ ವರದಿಗಳೂ ಬಂದಿವೆ. ಇದೆಲ್ಲಾ ರೈತರಿಗೆ ಬೇಸರ ತರುವಂತಹ ವಿಷಯಗಳು. ಈ ಶಾಸನ ಜಾರಿಗೆ ಬಂದ ಮೇಲೆ ನಮ್ಮ ರೈತಸಂಘಗಳು ಬಲಿಷ್ಠವಾಗಿದ್ದ ಕೆಲವು ಪ್ರದೇಶಗಳನ್ನು ಬಿಟ್ಟು ಉಳಿದ ಪ್ರದೇಶಗಳಲ್ಲಿ ಲಕ್ಷಾಂತರ ಬಡರೈತರು ತಮ್ಮ ಜಮೀನಿನ ಒಡೆತನ ಪಡೆಯುವ ಬದಲು ಜಮೀನನ್ನು ಕಳೆದುಕೊಂಡು ಕೃಷಿಕೂಲಿಗಾರರಾಗಿರುವುದನ್ನು ನಾವು ನೋಡುತ್ತಿದ್ದೇವೆ. ತಾವೂ ಒಂದು ತುಂಡು ಜಮೀನಿನ ಒಡೆಯರಾಗಿ ಬಾಳುವ ಕನಸನ್ನು ಕಾಣುತ್ತಿದ್ದ ರೈತರು ಈಗ ಕಂಗಾಲಾಗಿದ್ದಾರೆ; ಬೀದಿಪಾಲಾಗಿದ್ದಾರೆ.

ಇದಕ್ಕೆ ಕಾಂಗ್ರೆಸ್ ಸರಕಾರವೇ ಕಾರಣ ಈ ನ್ಯಾಯ ಮಂಡಳಿಗಳಿಂದ ಎಳ್ಳಷ್ಟಾದರೂ ರೈತರಿಗೆ ನ್ಯಾಯ ಸಿಗಬೇಕಾದರೆ ಈ ಮಂಡಳಿಗಳಲ್ಲಿ ಬದಲಾವಣೆ ತರಬೇಕು. ನಿಷ್ಠಾವಂತರಾದವರು, ರೈತ ಸಮಸ್ಯೆಗಳನ್ನು ಅರಿತವರು, ರೈತರ ಪರವಾಗಿರುವವರು ಈ ಮಂಡಳಿಗಳಲ್ಲಿರುವುದು ಅಗತ್ಯ. ಲಂಚಕೋರರಿಂದ ತುಂಬಿರುವ ಈಗಿನ ಮಂಡಳಿಗಳು ರದ್ದಾಗಲಿ. ಇವು ನ್ಯಾಯ ಮಂಡಳಿಗಳಲ್ಲ, ಅನ್ಯಾಯ ಮಂಡಳಿಗಳು. ಇವು ಹೋಗಲಿ.

(ಕಡೇ ಪುಟ ನೋಡಿ)

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮ್ಮೇಳನ

ಕುಂದಾಪುರದಲ್ಲಿ ಆಕರ್ಷಣೀಯ ರ್‍ಯಾಲಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದಕ್ಷಿಣ ಕನ್ನಡ ಜಿಲ್ಲೆಯ 11ನೇ ಸಮ್ಮೇಳನವು ನವೆಂಬರ್ 15 ಮತ್ತು 16ರಂದು ಕುಂದಾಪುರದಲ್ಲಿ ಜರುಗಿತು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಾ ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿ ಶ್ರೀ ಎಂ. ಕೆ. ಭಟ್ ಅವರು ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು. ಭಾರತದಲ್ಲಿ ಆಳುವ ವರ್ಗಗಳು ಅನುಸರಿಸಿಕೊಂಡು ಬಂದ ಬಂಡವಾಳಶಾಹಿ ಧೋರಣೆಯಿಂದಾಗಿ ದೇಶದ ಆರ್ಥಿಕ ವ್ಯವಸ್ಥೆಯು ತೀವ್ರವಾದ ಬಿಕ್ಕಟ್ಟಿನಲ್ಲಿ ಸಿಲುಕಿದೆಯೆಂದು ಈ ಬಿಕ್ಕಟ್ಟಿನ ಭಾರವನ್ನು ಜನಸಾಮಾನ್ಯರ ಮೇಲೆ ಹೇರಲು ಸರಕಾರವು ಪ್ರಯತ್ನಿಸುತ್ತಿದೆಯೆಂದೂ ಅವರು ಹೇಳಿದರು. ಅಂತಾರಾಷ್ಟ್ರೀಯ ಹಣಕಾಸುನಿಧಿಯಿಂದ ಐದು ಸಾವಿರ ಕೋಟಿ ರೂಪಾಯಿಗಳಿಗೂ ಮಿಕ್ಕಿ ಸಾಲಪಡೆಯಲು ಭಾರತ ಸರಕಾರವು ಮಾಡಿಕೊಂಡ ಒಪ್ಪಂದವನ್ನೂ ಅವರ ಶರ್ತಗಳನ್ನೂ ಒಪ್ಪುವ ಮೂಲಕ ಭಾರತ ಸರಕಾರವು ದೇಶದ ಸ್ವಾತಂತ್ರ್ಯವನ್ನೇ ಸಾಮ್ರಾಜ್ಯಶಾಹಿಗಳಿಗೆ ಒತ್ತೆ ಇಟ್ಟಿದೆ ಎಂದು ಹೇಳಿದರು. ಅವಶ್ಯಕ ಸೇವಾ ಕಾನೂನಿನಂತಹ ಕರಾಳ ಕಾನೂನುಗಳೂ ಕಾರ್ಮಿಕರ ಕೂಲಿಯನ್ನು ಸ್ಥಗಿತಗೊಳಿಸುವ ಪ್ರಯತ್ನಗಳೂ ಐ.ಎಂ.ಎಫ್. ನಿರ್ದೇಶನಗಳಿಗೆ ಅನುಸಾರವಾಗಿ ಭಾರತ ಸರಕಾರವು ಕೈಗೊಂಡ ಕ್ರಮಗಳೆಂದು ಅವರು ಎತ್ತಿತೋರಿಸಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕರ್ನಾಟಕದಲ್ಲಿ ಜನಸಾಮಾನ್ಯರ ವಿಶ್ವಾಸ ಮತ್ತು ಗೌರವವನ್ನು ಗಳಿಸುತ್ತಿದೆಯೆಂದೂ ರಾಜ್ಯದಲ್ಲಿ ಪಕ್ಷದ ಪ್ರಭಾವವು ಬೆಳೆದಿದೆಯೆಂದೂ ಅವರು ಹೇಳಿ, ಜನರ ನಿರೀಕ್ಷೆಗಳಿಗೆ ಅನುಗುಣವಾಗಿ, ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ನಡೆಸಿ ಯಾವುದೇ ತ್ಯಾಗ, ಬಲಿದಾನಗಳಿಗೂ ಸಿದ್ಧರಾಗುವಂತೆ ಅವರು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು. ಪಕ್ಷದ ರಾಜ್ಯ ಸಮಿತಿಯ ಸೆಕ್ರೆಟಾರಿಯೇಟ್ ಸದಸ್ಯರಾದ ಶ್ರೀ ಎಸ್. ಸೂರ್ಯನಾರಾಯಣರಾವ್ ಮತ್ತು ಶ್ರೀ ಪಿ. ರಾಮಚಂದ್ರರಾಯರೂ ಸಮ್ಮೇಳನದಲ್ಲಿ ಭಾಷಣ ಮಾಡಿದರು. ಸೆಕ್ರೆಟಾರಿ

(ಕಡೇ ಪುಟ ನೋಡಿ)

ಐ. ಎಂ. ಎಫ್. ಸಾಲ

ದೇಶದ ಅರ್ಥವ್ಯವಸ್ಥೆಯನ್ನು ಒತ್ತೆಯಿಡುವ ಒಪ್ಪಂದ

ನವೆಂಬರ್ 9ರಂದು ವಾಷಿಂಗ್ಟನ್‌ನಲ್ಲಿ ಸಭೆ ಸೇರಿದ್ದ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐ. ಎಮ್. ಎಫ್.) ಭಾರತ ಕೇಳಿದ್ದ ಸುಮಾರು 5500 ಕೋಟಿ ರೂಪಾಯಿಗಳ(5.7 ಬಿಲಿಯ ಡಾಲರ್) ಸಾಲವನ್ನು ಮಂಜೂರು ಮಾಡಿದೆ. ಇದನ್ನು ಹಂತಹಂತವಾಗಿ ನೀಡಲಾಗುವುದು. ಪ್ರತೀ ಹಂತದಲ್ಲೂ ಸಾಲ ಪಡೆಯುವ ಮೊದಲು ಭಾರತ ಕೆಲವು "ಕಾರ್ಯನಿರ್ವಹಣೆಯ ಪರೀಕ್ಷೆ"ಗಳನ್ನು ಪಾಸುಮಾಡಬೇಕು. ಇಂತಹ ಪರೀಕ್ಷೆಗಳನ್ನು ಪ್ರತೀ ಹಂತದ ಅಂತ್ಯದಲ್ಲಿ ಮಾತ್ರವಲ್ಲ ಬೇರೆಬೇರೆ ಅವಧಿಗಳಲ್ಲೂ ನಡೆಸುವ ಅಧಿಕಾರ ಹಣಕಾಸು ನಿಧಿಗಿದೆ. ಸ್ವಲ್ಪದರಲ್ಲಿ ಹೇಳಬೇಕಾದರೆ ಭಾರತದ ಆರ್ಥಿಕ ವ್ಯವಸ್ಥೆ ಐ. ಎಮ್. ಎಫ್.ನ ಕಪಿಮುಷ್ಟಿಯೊಳಗಿರುತ್ತದೆ. ಈ ಪರೀಕ್ಷೆಗಳಲ್ಲಿ ಭಾರತ ಯಶಸ್ವಿಯಾಗದಿದ್ದರೆ ನಂತರದ ಹಂತದಲ್ಲಿ ಐ. ಎಮ್. ಎಫ್.ನ್ನು ತೃಪ್ತಿಪಡಿಸಲು ಸರಕಾರ ಜನತೆಯನ್ನು ಮತ್ತಷ್ಟು ಹಿಂಡಬೇಕಾಗುತ್ತದೆ.

ಐ.ಎಮ್.ಎಫ್.ನ ಈ ಹತೋಟಿ ಭಾರತ ಸರಕಾರದ ಸಂಪೂರ್ಣ ಆರ್ಥಿಕ ಹಾಗೂ ರಾಜಕೀಯ ಧೋರಣೆಗಳನ್ನು ವ್ಯಾಪಿಸಿರುತ್ತದೆ. ಒಂದು ಸಾರ್ವಭೌಮ ದೇಶದ ಸರಕಾರ ನಿರ್ಧರಿಸಬೇಕಾದ ಎಲ್ಲಾ ಧೋರಣೆಗಳನ್ನು ಇನ್ನು ಮುಂದೆ ಐ. ಎಮ್. ಎಫ್. ನಿರ್ಧರಿಸಬೇಕು. ಇದರಿಂದಾಗಿ ಬಹಳ ಸಡಗರದಿಂದ ಪ್ರಾರಂಭವಾದ ಆರನೇ ಪಂಚವಾರ್ಷಿಕ ಯೋಜನೆ ಕೆಲವು ಒಂದು ತಮಾಷೆಯಾಗಿ ಬಿಡುತ್ತದೆ. ಇದನ್ನು ರದ್ದುಪಡಿಸಿದಂತೆಯೇ ಭಾರತ ಸರಕಾರ ಈ ಒಪ್ಪಂದದ ಮೂಲಕ ತನ್ನ ಆರ್ಥಿಕ ಸಾರ್ವಭೌಮತ್ವವನ್ನು ಐ.ಎಮ್.ಎಫ್. ಎಂಬ ಸಾಮ್ರಾಜ್ಯಶಾಹೀ ಸಂಸ್ಥೆಗೆ ಒತ್ತೆಯಿಡುವ ನಾಚಿಕೆಗೇಡಿನ ಕೆಲಸ ಮಾಡಿದೆ.

ಐ. ಎಮ್. ಎಫ್.ನ ಶರ್ತಗಳನ್ನು ಪೂರೈಸುವುದೆಂದರೆ ಬೆಲೆಯೇರಿಕೆ ಇತ್ಯಾದಿಗಳ ಮೂಲಕ ಒಂದೆಡೆ ಹಣದುಬ್ಬರ ಹೆಚ್ಚಿಸಿ ಇನ್ನೊಂದೆಡೆ ರಫ್ತಿಗಾಗಿಯೇ ಉತ್ಪಾದನೆ ಹಾಗೂ ಅನಗತ್ಯ ವಸ್ತುಗಳ ಕಡ್ಡಾಯ ಆಮದಿನ ಮೂಲಕ ನಿರುದ್ಯೋಗ ಹೆಚ್ಚಿಸಿ ಜನಸಾಮಾನ್ಯನ ಮೇಲೆ ಎಲ್ಲ ದಿಕ್ಕಿನಿಂದಲೂ ಭಾರೀ ಪ್ರಮಾಣದ ಹಲ್ಲೆ ನಡೆಸಿದಂತೆಯೇ. ಭಾರತದ ಆರ್ಥಿಕ ವ್ಯವಸ್ಥೆಯನ್ನು ಮನಬಂದಂತೆ ಮೇಯಲು ಬಹುರಾಷ್ಟ್ರೀಯ ಸಂಸ್ಥೆಗಳಿಗೆ, ಏಕಸ್ವಾಮ್ಯ ಬಂಡವಾಳಶಾಹಿಗಳಿಗೆ ಅನಿರ್ಬಂಧಿತ ಸ್ವಾತಂತ್ರ್ಯ ಈ ಸಾಲ ಒಪ್ಪಂದದ ಮೂಲಕ ದೊರೆತಿದೆ. ಇಷ್ಟೆಲ್ಲಾ ಭಯಂಕರ ಶರತ್ತುಗಳಿಗೊಪ್ಪಿದರೂ ಐ.ಎಮ್.ಎಫ್.ನ್ನು ತೃಪ್ತಿಪಡಿಸುವುದು ಭಾರತ ಸರಕಾರದಿಂದಾಗಲಿಕ್ಕಿಲ್ಲ. ಯಾಕೆಂದರೆ ಐ.ಎಮ್.ಎಫ್.ನಿಂದ ಸಾಲಪಡೆದ ಎಲ್ಲಾ ದೇಶಗಳ ಕಟು ಅನುಭವವಿದು. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ಶ್ರೀಲಂಕಾ. ಅಲ್ಲಿ ಇದರ ಪರಿಣಾಮವಾಗಿ ನಾಲ್ಕು ವರ್ಷಗಳಲ್ಲಿ 90ಶೇಕಡಾ ಹಣದುಬ್ಬರ ಹೆಚ್ಚಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ರದ್ದುಪಡಿಸಲಾಗಿದೆ.

ಆದರೂ ಇಂದಿರಾ ಸರಕಾರ ಈ ಜನವಿರೋಧೀ ಹಾಗೂ ರಾಷ್ಟ್ರವಿರೋಧೀ ವ್ಯವಹಾರ ಮುಂದುವರೆಸುವ ಪಣತೊಟ್ಟಂತಿದೆ. ಭಾರತದ ಹಿರಿಬೂರ್ಜ್ವಾವರ್ಗದ ಒಂದು ಸಣ್ಣಗುಂಪಿಗೆ ಲಾಭ ದೊರಕಿಸುವ ವ್ಯವಹಾರ ಇದು. ಸರಕಾರ ರಫ್ತುಮಾಡುವುದರಲ್ಲಿ ಎಷ್ಟೊಂದು ಉತ್ಸುಕತೆ ತೋರಿಸುತ್ತಿದೆಯೆಂದರೆ ಅಕ್ಕಿಯನ್ನೂ ಒಂದು 'ರಫ್ತುಮಾಡಬಹುದಾದ' ಸಾಮಗ್ರಿ ಎಂದು ಸರಕಾರ ಪಟ್ಟಿಮಾಡಿದೆ. ಈ ಕಡೆ 'ಕೂಲಿಗಾಗಿ ಕಾಳು' ಕಾರ್ಯಕ್ರಮವನ್ನು ಕೈಬಿಟ್ಟು, ಆಹಾರ ನೆರವನ್ನು ಕಡಿತಗೊಳಿಸಿ ಉಳಿಸಿದ ಅಕ್ಕಿಯನ್ನು ರಫ್ತುಮಾಡಲಾಗುವುದು. ಇದೇ ಐ. ಎಮ್. ಎಫ್.ನ ತಂತ್ರಕೂಡಾ- ಜನತೆಯನ್ನು ಉಪವಾಸವಿಟ್ಟು ರಫ್ತನ್ನು ಹೆಚ್ಚಿಸಿ ಆ ಮೂಲಕ ಅನಗತ್ಯ ಆಮದಿಗೆಬೇಕಾದ ವಿಪರೀತ ಮೊತ್ತಕ್ಕೆ ಹಣ ಸಂಗ್ರಹಿಸುವುದು. ಇಂತಹ ಆಮದಿನಿಂದ ದೇಶದ ಅರ್ಥವ್ಯವಸ್ಥೆಗೆ ಸಿಗುವ 'ಕಾಣಿಕೆ'ಯೆಂದರೆ ಉದ್ಯೋಗಾವಕಾಶಗಳ, ನಿಪುಣತೆಯ, ತಂತ್ರಜ್ಞಾನದ ಹಾಗೂ ಉತ್ಪಾದನಾ ಸಾಮರ್ಥ್ಯದ ನಾಶ.

ಬರಹದಲ್ಲಿರುವ ಈ ಶರತ್ತುಗಳು ನಮ್ಮ ಅರ್ಥವ್ಯವಸ್ಥೆಯನ್ನು ದಾಸ್ಯಕ್ಕೊಳಪಡಿಸುವಷ್ಟು ಬಿಗಿಯಾಗಿದ್ದರೆ, ಪರೋಕ್ಷವಾದ ಶರತ್ತುಗಳು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿ ನಡೆಸಬೇಕು ಎನ್ನುವುದು. ಅಗತ್ಯ ಸೇವಾ ನಿರ್ವಹಣಾ ಶಾಸನಕ್ಕೂ ಐ. ಎಮ್. ಎಫ್. ದೇವತೆಗಳನ್ನು ತೃಪ್ತಿಗೊಳಿಸುವ ಪ್ರಯತ್ನಕ್ಕೂ ಸಂಬಂಧವಿದೆ. ಆದ್ದರಿಂದ ಎಲ್ಲಾ ವಿರೋಧ ಪಕ್ಷಗಳೂ ಈ ರಾಷ್ಟ್ರವಿರೋಧೀ ವ್ಯವಹಾರವನ್ನು ಬಲವಾಗಿ ಖಂಡಿಸಬೇಕು; ಎಲ್ಲಾ ದೇಶಪ್ರೇಮಿ ಶಕ್ತಿಗಳು, ರಾಜಕೀಯ ಪಕ್ಷಗಳು ಹಾಗೂ ಸಾಮೂಹಿಕ ಸಂಘಟನೆಗಳು ಈ ದುರ್ವ್ಯವಹಾರದ ವಿರುದ್ಧ ಪ್ರತಿಭಟನೆಯ ದನಿಯೆತ್ತಬೇಕು.

ಬೆಳ್ಳಿ ಹಬ್ಬದ ಕರ್ನಾಟಕದ ದಲಿತರು

ಕರ್ನಾಟಕದ ಎಲ್ಲೆಡೆ ಸಂಭ್ರಮ-ಸಮಾರಂಭ – ಹಾರತುರಾಯಿಗಳು, ಪತ್ರಿಕೆಗಳಲ್ಲಿ ಸರಕಾರದ ಸಾಧನೆಗಳ ಜಾಹೀರಾತುಗಳು, ಬೀದಿಬೀದಿಗಳಲ್ಲಿ ಕರ್ನಾಟಕ ಮಾತೆಯ(?) ಭಾವಚಿತ್ರದ ಮೆರವಣಿಗೆಗಳು-ಪಟಾಕಿ, ಕೋಲಾಟ, ಹರ್ಷೋದ್ಗಾರ, ಘೋಷಣೆಗಳು... ಈ ಆರ್ಭಟದಲ್ಲಿ ರೈತ-ಕಾರ್ಮಿಕರ, ದಲಿತರ, ನಿರುದ್ಯೋಗಿಗಳ ಚೀತ್ಕಾರ ಕೇಳಿಸದಂತಾಗಿದೆ. ಈ ಚೀತ್ಕಾರ ಕೇಳಬಾರದೆಂದೇ ಈ ಚಟುವಟಿಕೆಗಳೇನೋ ಎನ್ನುವ ಗುಮಾನಿ ಬಾರದಿರದು!

ತಮ್ಮೆಲ್ಲ ಸಾಧನೆಗಳನ್ನು ಪ್ರಚಾರಕ್ಕಿಟ್ಟ ಸರಕಾರ ನರಗುಂದ, ನವಲಗುಂದ, ಶಿವಮೊಗ್ಗ, ನಿಪ್ಪಾಣಿಗಳ ರೈತಬಂಡಾಯ, ಬೆಂಗಳೂರಿನ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಚಾರಿತ್ರಿಕ ಹೋರಾಟ, ಭಾಲ್ಕಿ ದಲಿತರ ಅಧೋಗತಿ, ದಾಂಡೇಲಿಯಲ್ಲಿ ಮಹಿಳೆಯರನ್ನು ದಂಡಿಸಿ ಗರ್ಭಪಾತಗೊಳಿಸಿದ್ದು, ಬಡಸ್ಟೈಫಂಡರಿಗಳನ್ನು ತ್ರಿಶಂಕು ಸ್ಥಿತಿಯಲ್ಲಿರಿಸಿದ್ದು ಇನ್ನೂ ಮುಂತಾದ ಮಹತ್ತರ ಸಾಧನೆಗಳನ್ನು ಪ್ರಚಾರಕ್ಕಿಡದಿದ್ದರೂ ಕ್ರೂರ ಅನುಭವಗಳನ್ನು ಅನುಭವಿಸಿದ ಜನತೆ ಮರೆಯಲಾರದು.

ಕರ್ನಾಟಕದ ಎಲ್ಲ ಹೋರಾಟಗಳೂ ಪತ್ರಿಕೆಗಳ ಮುಖಪುಟಗಳಲ್ಲಿ ಪ್ರಚಾರಗೊಂಡಿವೆ. ಇದಕ್ಕೆ ಹೊರತಾದುದೆಂದರೆ ಗಂಗಾವತಿ (ರಾಯಚೂರು ಜಿಲ್ಲೆ)ಯ ದಲಿತರ ಧೀರೋದಾತ್ತ ಹೋರಾಟ! ದಲಿತ ಜನಾಂಗದ ಹೋರಾಟದ ಪ್ರಜ್ಞೆ ಬೆಳೆಯುತ್ತಿರುವ ಸೂಚನೆ ಇದಾಗಿದೆ. ಅದರ ಸ್ವರೂಪವನ್ನು ಸ್ವಲ್ಪದರಲ್ಲಿ ವಿವರಿಸಲಾಗಿದೆ.

ಗಂಗಾವತಿ ತಾಲ್ಲೂಕಿನ ಹಿರೇಜಂತಕಲ್ ಗ್ರಾಮದ 34 ದಲಿತ ಕುಟುಂಬಗಳು 1957ನೇ ಇಸವಿಯಿಂದ ವಿರುಪಾಪೂರ್ ಗ್ರಾಮದ ರಾಮಲಿಂಗನ ಕೆರೆಯನ್ನು ಸಾಗುವಳಿ ಮಾಡುತ್ತಾ ಬಂದಿದ್ದಾರೆ. ವಿಪರ್ಯಾಸವೆಂದರೆ 24 ವರ್ಷಗಳ ಹಿಂದೆಯೇ ಈ ಭೂಮಿಯನ್ನು ಹಂಚಿದ್ದರೂ ಈವರೆಗೆ ಸಾಗುವಳಿದಾರರಿಗೆ ಪಟ್ಟಾ (Registration) ಕೊಟ್ಟಿಲ್ಲ. ಪಟ್ಟಾ ಬೇಕೆಂದು ಬಹಳ ವರ್ಷಗಳಿಂದ ದಲಿತರು ಸರಕಾರವನ್ನು ಒತ್ತಾಯಿಸುತ್ತಾ ಬಂದಿದ್ದಾರೆ. ಸಾಮೋಪಾಯಕ್ಕೆ ಮಣಿಯುವ ಅಭ್ಯಾಸವೇ ಇಲ್ಲದ ಈ ಸರಕಾರ ಮಂದಗಮನವಾಗಿಯೇ ಇತ್ತು. ಇದ್ದಕ್ಕಿದ್ದಂತೆ 'ಲೋಕೋಪಯೋಗಿ' ಇಲಾಖೆಯ ಗಂಗಾವತಿ ಶಾಖೆಯು ಈ ಜಮೀನು 'ಟ್ರ್ಯಾಪ್ ಬೆಡ್' ಕ್ಷೇತ್ರವೆಂದೂ ಕೂಡಲೇ ಸಾಗುವಳಿ ನಿಲ್ಲಿಸಿ ತಮ್ಮ ವಶಕ್ಕೆ ಕೊಡಬೇಕೆಂದೂ ಘೋಷಿಸಿತು. ಅದರಂತೆ ಇಲಾಖೆಯಿಂದ ಸಾಗುವಳಿದಾರರಿಗೆ ನೋಟೀಸ್‌ಗಳೂ ಬಂದವು. ಆಶ್ಚರ್ಯವೆಂದರೆ ಪಿ. ಡಬ್ಲ್ಯೂ. ಡಿ. ಇಲಾಖೆಯಲ್ಲಿ ಆ ಜಮೀನಿಗೆ ಸಂಬಂಧಪಟ್ಟ ಯಾವ ದಾಖಲೆಗಳೂ ಇಲ್ಲ!

ಇನ್ನೊಂದಾಶ್ಚರ್ಯವೆಂದರೆ, ಅರಣ್ಯ ಇಲಾಖೆಯವರು ಪಿ.ಡಬ್ಲ್ಯೂ.ಡಿ.ಗಿಂತ ತಾವೇನೂ ಕಡಿಮೆಯಿಲ್ಲವೆಂದು ತೋರಿಸಿಕೊಡಲೇನೋ ಎನ್ನುವಂತೆ, ರಾಮಲಿಂಗನ ಕೆರೆಯ ಜಮೀನು ಅರಣ್ಯ ಕ್ಷೇತ್ರಕ್ಕೆ ಸೇರಿದ್ದೆಂದೂ ಘೋಷಿಸಿತು. ಅದೇ ವೇಳೆಗೆ ಕರ್ನಾಟಕ ಘನ ಸರಕಾರವು ಅರಣ್ಯ ಭೂಮಿ (Forest Land)ಯನ್ನು ಅನಧಿಕೃತವಾಗಿ ಯಾರೇ ಸಾಗುವಳಿ ಮಾಡುತ್ತಿದ್ದಲ್ಲಿ ಆ ಜಮೀನನ್ನು ಅವರಿಗೇ ಬಿಟ್ಟುಕೊಡಬೇಕೆಂದು ಒಂದು ಸುತ್ತೋಲೆ ಹೊರಡಿಸಿತು. ಹೀಗಿದ್ದಾಗ್ಯೂ, ಸಾಗುವಳಿದಾರರಿಗೆ ಪಟ್ಟಾಕೊಡುವ ಕಾರ್ಯ ನಡೆಯಲಿಲ್ಲ. ಪಟ್ಟಾಮಾಡಿಕೊಡುವುದಾಗಿ ಆಶ್ವಾಸನೆ ಕೊಟ್ಟು ಸಂಬಂಧಿಸಿದ ಎಷ್ಟೋ ಅಧಿಕಾರಿಗಳು ದಲಿತರಿಂದ ನೆಲ್ಲಿ (ಬತ್ತ)ದ ರೂಪದಲ್ಲಿ ಲಂಚ ಪಡೆದೂ ಪಟ್ಟಾಮಾಡಿಸಿಕೊಡಲಿಲ್ಲ! ಅಷ್ಟರಲ್ಲಿ ದಲಿತರ ಕೋಪವನ್ನು ಕೆಣಕಲು ಭಾರತ ಕೇಂದ್ರ ಸರಕಾರವು ಒಂದು ಆದೇಶವನ್ನು ಹೊರಡಿಸಿತು. ಅದೆಂದರೆ "ಯಾರೇ ಅರಣ್ಯ ಪ್ರದೇಶದಲ್ಲಿ ಭೂಮಿಯನ್ನು ಅಧಿಕೃತ ಯಾ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಲ್ಲಿ ಶೀಘ್ರದಲ್ಲಿಯೇ ನಿಲ್ಲಿಸಬೇಕು". ಸರಿ, ಇವಕ್ಕೂ ಸಾಗುವಳಿದಾರರಿಗೆ ನೋಟೀಸುಗಳು ಬಂದವು.

ಗಮನಾರ್ಹ ವಿಷಯವೆಂದರೆ, ಆ ಜಮೀನು ಒಂದನೇ ವರ್ಗದ ಭೂಮಿ. ಅಂದರೆ ಕಬ್ಬು-ಬತ್ತ-ನೆಲಗಡಲೆ ಫಲವತ್ತಾಗಿ ಬೆಳೆಯುವಂತಹುದು. ಬಂಜರು ಭೂಮಿಯನ್ನು ಮತ್ತು ಫಲವತ್ತಲ್ಲದ ಭೂಮಿಯನ್ನು ಮಾತ್ರ ಅರಣ್ಯವೆಂದು ಪರಿಗಣಿಸತಕ್ಕದ್ದು. ಗಮನಿಸಬೇಕಾದ ವಿಷಯವೆಂದರೆ, ಆ ಜಮೀನು ಕಂದಾಯ ಇಲಾಖೆಯ ದಾಖಲೆಗಳಲ್ಲಿ 'ಗೈರಾಣ' ಭೂಮಿ (Fallow Land) ಎಂದು ಇದೆ. ಅದನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿದ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಒಂದಕ್ಕೊಂದು ತಾಳ-ತಂತವಿಲ್ಲದ ಆದೇಶ ಸುತ್ತೋಲೆಗಳನ್ನು ಅವಲೋಕಿಸಿದರೆ, ಸರಕಾರದ ಜಾಗೃತೆ, ಶಿಸ್ತುಗಳು ವ್ಯಕ್ತವಾಗುತ್ತವೆ. ತೊಘಲಕ್‌ನಂತೆ ವರ್ತಿಸುವ ಈ ಸರಕಾರ-ಅಧಿಕಾರಿಗಳ ನಡುವೆ ಸಿಂಬಳದಲ್ಲಿ ಸಿಕ್ಕ ನೊಣವಾಗಿದ್ದಾನೆ ದಲಿತ.

ಇವರ ಸ್ಥಿತಿ ಹೀಗಾದರೆ, ಅದೇ ತಾಲ್ಲೂಕಿನ ಕನಕಗಿರಿ ಗ್ರಾಮದ ದಲಿತರ ಸ್ಥಿತಿ ಇದಕ್ಕೂ ಶೋಚನೀಯವಾದದ್ದು! ಕನಕಗಿರಿಯ ತಿಪ್ಪನಾಳಕೆರೆ ಒಟ್ಟು 96 ಎಕರೆ ವಿಸ್ತೀರ್ಣವಿದ್ದು ಅದಕ್ಕೆ ಮೂರು ಜನ ಪಟ್ಟಾದಾರರಿದ್ದರು. ಕಾರಣಾಂತರಗಳಿಂದ ಕಂದಾಯ ಕೊಡದಿದ್ದುದರಿಂದ ಸರಕಾರವು ಆ ಜಮೀನನ್ನು ತನ್ನ ಸ್ವಾಧೀನಕ್ಕೆ ಪಡೆಯಿತು. ನಂತರದಲ್ಲಿ ಕೆಲವರ್ಷ ಹರಾಜುಮಾಡಿ ಲಾವಣಿಕೊಡುತ್ತಿತ್ತು. ಬರುಬರುತ್ತಾ ನಿರ್ಲಕ್ಷಕ್ಕೊಳಗಾಗಿ ಆ ಭೂಮಿ ಹಾಳುಬಿದ್ದು ಗಿಡ-ಗಂಟಿಗಳಿಂದ ಆವೃತ್ತವಾಯಿತು.

ಈ ಸಂದರ್ಭದಲ್ಲಿ ಅಂದರೆ 1960 ಇಸವಿಯಲ್ಲಿ ಸುಮಾರು 30 (ಮೂವತ್ತು) ದಲಿತ ಕುಟುಂಬಗಳು ಆ ಕೆರೆಯ ಜಮೀನನ್ನು ಶ್ರಮವಹಿಸಿ ಸಾಗುವಳಿಗೆ ಯೋಗ್ಯ ಭೂಮಿಯನ್ನಾಗಿ ಮಾಡಿಕೊಂಡು 1970ರ ವರೆಗೆ ಉತ್ತನೆ ಮಾಡಿಕೊಂಡಿದ್ದರು.

ನೂರಾರು ಎಕರೆ ಜಮೀನು ಹೊಂದಿದ ಟಿ. ಡಿ. ಬಿ. ಸದಸ್ಯಳಾದ (ಮರಿ ಇಂದಿರಾ) ಶ್ರೀಮಂತಿ ಪಾರ್ವತಿ ದೇವಿ ಇದ್ದಕ್ಕಿದ್ದಂತೆ ದಲಿತರಿಗೆ ಮಾರಿಯಾದಳು. ಹೇಗೆಂದರೆ, ತಿಪ್ಪನಾಳಕೆರೆಯ ಮೊದಲಿನ ಮೂರು ಜನ ಪಟ್ಟಾದಾರರಿಗೆ, ಅಧಿಕಾರಿಗಳಿಗೆ ಕೊಡಬೇಕಾದುದನ್ನು ಕೊಟ್ಟು ತನ್ನ ಹೆಸರಿನಲ್ಲಿ ಅಕ್ರಮವಾಗಿ ಕೆರೆ ಜಮೀನನ್ನು ದಾಖಲುಮಾಡಿಸಿ "ಹಾವು ಗೆದ್ದಲು ಕಟ್ಟಿದ ಹುತ್ತವನ್ನು ಹೊಕ್ಕಂತೆ" ಆ ಜಮೀನಿಗೆ ಮಾಲೀಕಳಾದಳು. ಇದನ್ನು ಸಹಿಸದ ದಲಿತರು ಉಗ್ರವಾಗಿ ಪ್ರತಿಭಟಿಸಿದರು. ಇಂಥವರನ್ನು ಒದ್ದು ಮೂಲೆಯಲ್ಲಿ ಕೂಡಿಸಲೆಂದೇ ಸಿದ್ಧವಾಗಿರುವ

ಗಂಗಾಧರ ಕುಪ್ಪಗಿ

ಪೋಲೀಸರು ದಲಿತರಿಗೆ ಚಂದ್ರ, ಲಾಠಿ, ಬೂಟುಗಳ ಪ್ರಯೋಗ ನಡೆಸಿದರು. "ಹರಿಜನ-ಗಿರಿಜನರ ಏಳ್ಗೆಗಾಗಿ" ಹಗಲಿರುಳೂ ಶ್ರಮವಹಿಸಿ ತಮ್ಮ ಹೊಟ್ಟೆ-ಕುತ್ತಿಗೆಗಳನ್ನು ಬೆಳೆಸಿದವರಾರೂ ಸಹಾಯಕ್ಕೆ ಬರಲಿಲ್ಲ ಈ ಬಡಪಾಯಿ ದಲಿತರಿಗೆ!

ಇಷ್ಟಾದರೂ ದಲಿತರು ತಮ್ಮ ಛಲ ಬಿಡಲಿಲ್ಲ. ಪ್ರತಿ ವರ್ಷವೂ ಬಿತ್ತನೆಗೆ-ಕೊಯ್ಲಿಗೆ ತಡೆ ಒಡ್ಡುತ್ತಾ ಬಂದರು. ಅದಕ್ಕೆ ಪ್ರತಿಯಾಗಿ ಮಾರಿ ಪಾರ್ವತಿಯೂ ಮಾರಕ ಪೋಲೀಸರಿಂದ ಶಾಸ್ತಿ ಮಾಡಿಸುತ್ತಾ ಬಂದಳು. ಒಟ್ಟಿನಲ್ಲಿ ಜಮೀನಿನಲ್ಲಿ ನಡೆಯುವ ಎಲ್ಲ ಕೆಲಸಗಳಿಗೆ ಪೋಲೀಸ್ ರಕ್ಷಣೆ ಬೇಕೇ ಬೇಕಾಯ್ತು. ಬಾಯಿ ಮೂಗುಗಳಿಂದ ತಿಂದರೂ ಆಸ್ತಿ ಕರಗದ ಭೂ ಒಡೆಯರಿಗೆ ರಕ್ಷಣೆ! ಹೊತ್ತಿನ ತುತ್ತು ಕೂಳಿಗಾಗಿ ಪರದಾಡುವ ದಲಿತರಿಗೆ ಕೋರ್ಟು, ಜೇಲು-ಲಾಠಿ-ಬೂಟುಗಳ ಆಶೀರ್ವಾದ!!

ಕಾಲಸುದಂತೆ ರಾಜಕೀಯವೂ ಬದಲಾಯಿತು. ಅರಸು ಹೋಗಿ ಗುಂಡೂ-ಬಂಗೂಗಳ ಆರ್ಭಟ ಪ್ರಾರಂಭ. ರಾಜ್ಯಮಟ್ಟದ ಆರ್ಭಟ, ಜಿಲ್ಲಾಮಟ್ಟ-ತಾಲ್ಲೂಕಾ-ಹಳ್ಳಿಗಳ ಮಟ್ಟಕ್ಕೂ ಇಳಿಯಿತು. ಗುಂಡೂರ ಬೆನ್ನುಬಿದ್ದ ಪಾರ್ವತಿ ದೇವಿಯು ಮೇಲೆ ಸದಾ ಅಮಲಿನಲ್ಲಿ ತೇಲಾಡುವ ಬಂಗೂಮಂತ್ರಿಯರ ವಕ್ರದೃಷ್ಟಿ ಬಿತ್ತು. ದಿಕ್ಕು ತೋಚದ ಸ್ಥಿತಿಯಲ್ಲಿದ್ದ ದಲಿತರಿಗೆ ತಮ್ಮ ಬೆಂಬಲವಿದೆ ಎಂದು ಹೇಳಿ ಕೆರೆ ಜಮೀನನ್ನು ಬಿತ್ತಣಿಗೆ ಮಾಡಲು ಪ್ರೇರೇಪಿಸಿದರು. ಮುಗ್ಧ ದಲಿತರು ಇಷ್ಟು ದಿನ ತಮ್ಮನ್ನು ಯಾರೂ ಮಾತೇ ಆಡಿಸುತ್ತಿರಲಿಲ್ಲ. ಇಂದು ಇವರಾಗಿಯೇ ಬಂದು ಹೇಳುತ್ತಿದ್ದಾರೆ, ನಾವೇಕೆ ತೆಪ್ಪಗಿರಬೇಕೆಂದು ಯೋಚಿಸಿ ದಲಿತರೆಲ್ಲಾ ಒಕ್ಕಟ್ಟಾಗಿ ಜಮೀನು ಬಿತ್ತಲು ಹೋದರು. ಕೂಡಲೇ ಮಾರಿದೇವಿ ಒಂದು ವ್ಯಾನ್ ಪೋಲೀಸರನ್ನು ಕರೆಸಿ ಅಮಾನುಷವಾಗಿ ಅವರನ್ನು ಥಳಿಸುವ ವ್ಯವಸ್ಥೆ ಮಾಡಿದಳು. ಎಷ್ಟೋ ಸ್ತ್ರೀಯರಿಗೆ ಗಾಯಗಳಾದವು. ನಂತರ ಹೆಂಗಸರನ್ನು ಸೇರಿ ಒಟ್ಟು 27ಜನರನ್ನು ವ್ಯಾನಿನಲ್ಲಿ ತುಂಬಿಕೊಂಡು ಒಯ್ದು ಬಳ್ಳಾರಿ ಜೈಲಿನಲ್ಲಿ ಮೂರು ದಿನಗಳ ಕಾಲ ಕೂಡಿಟ್ಟು ಆ ಮೇಲೆ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ಕೋರ್ಟು ಕಛೇರಿಗಳಿಗೆ ಓಡಾಡಿ ಜೀವಂತ ಹೆಣಗಳಾಗಿದ್ದಾರೆ. ಈ ಕರ್ನಾಟಕದ ಬೆಳ್ಳಿಹಬ್ಬವನ್ನು ಮುಗ್ಧ ದಲಿತರು ಕೋರ್ಟಿನ ಕಟಕಟೆಯಲ್ಲಿ ಆಚರಿಸಬೇಕಾದ ಪರಿಸ್ಥಿತಿ ಒದಗಿದ್ದು ಈ ಕಾಂಗ್ರೆ ಸರಕಾರದಿಂದ ಮತ್ತು ಬಂಡವಾಳಶಾಹೀ-ಭೂಮಾಲೀಕ ವ್ಯವಸ್ಥೆಯಿಂದ! ಈ ಭ್ರಷ್ಟರು ಇಂತಹ ಘಟನೆಗಳಿಗೆಲ್ಲ ಕಾರಣೀಭೂತರಿದ್ದೂ ಜನರಿಗೆ ಬಣ್ಣದ ಕನ್ನಡಕ ತೊಡಿಸಿ ಭ್ರಮೆಯಲ್ಲಿ ನೂಕಿದ್ದಾರೆ. ಜನತೆ ಇದನ್ನರಿತು ಸ್ವಚ್ಛಕಣ್ಣಿನಿಂದ ಈ ಎಲ್ಲ ನಿಜಸ್ವರೂಪಗಳನ್ನು ಅರಿಯಬೇಕಿದೆ!.

ಬಾಳೊಂದು ರಮ್ಯಕಾಣಿಕೆಯೇ?

ಯಾವ ದನಿಯಲ್ಲಿ ಹೇಳಲಿ ಈ ಬಾಳೊಂದು ರಮ್ಯಕಾಣಿಕೆಯೆಂದು?
ಕೇಳುತ್ತೇನೆ, ದಿನಾಲೂ ಪತ್ರಿಕೆಗಳ ಕಿಡಕಿಗಳ ಮೂಲಕ ಬರುವ
ಸಣ್ಣ ದೊಡ್ಡ ಬಂಡೆಗಳನ್ನಪ್ಪಳಿಸಿ ಸಾಗಿರುವ ದುಃಖದ ಹೊಳೆಯ ಸಪ್ಪಳ.
ಕಾಣುತ್ತೇನೆ, ಮನುಷ್ಯರನ್ನೇ ಹರಿದು ಹೀಯಾಳಿಸಿ
ಶರೀರಸೌಷ್ಟವ-ಮಾನಸಿಕ ಆರೋಗ್ಯ ಕಾಪಾಡಬಹುದೆಂಬ ತತ್ವಾಚರಣೆಯ
ಮನುಷ್ಯರನ್ನು.
ದಕ್ಷಿಣ ಆಫ್ರಿಕೆಯಲ್ಲಿ ಪೋಲೀಸರ ಏಟಿಗೆ ರಸ್ತೆಯ ಮಧ್ಯ ಬಿದ್ದು ನರಳುವ
ಆ ಮುದಿ ಕಪ್ಪು ಮಹಿಳೆಯ ಕಣ್ಣುಗಳು.
'ಪ್ರಜಾಪ್ರಭುತ್ವ' ರಕ್ಷಣೆಗಾಗಿ ಪ್ರತಿವರ್ಷ 1,80,000 ಕೋಟಿ ರೂ.
ಮಿಲಿಟರಿಗಾಗಿ ಖರ್ಚುಮಾಡುವ ಅಮೇರಿಕನ್ ಸಾಮ್ರಾಜ್ಯವಾದಿಗಳ
ತೀರ ಇತ್ತೀಚಿನ ಹೊಸ ಹಸಿವು ನ್ಯೂಟ್ರಾನ್ ಬಾಂಬ.
ಎಲ್ ಸಾಲ್ವಾಡಾರ್‌ನಲ್ಲಿ ದಿನನಿತ್ಯ ನರಮೇಧ.
ಉಗಾಂಡಾದ ಹರೆಯದ ಹುಡುಗಿ... ಉಗಾಂಡಾದ ಹರೆಯುಸ್ಸಿನ ತಾಯಿಯ ಮೊಲೆಗಳು ಒಣಗಿದ ಸಿಪ್ಪೆ
ಮಗು ಎಲುಬುಗಳು ಹೆಣೆದ ಸಾವಿನ ಗೂಡು.
ದುಬಾಯಿಯ ಮರಳುಗಾಡನ್ನು ನಂದನವನವಾಗಿಸಿದ ಹೊರ ದೇಶದ
ಕಾರ್ಮಿಕಸ್ಥಿತಿ ಯಾವುದೇ ಹಕ್ಕು-ಸ್ವಾತಂತ್ರ್ಯಗಳಿಲ್ಲದ ದನಗಳದು,
ಹೀಗೇಕೆ? ಎಂಬುದಕ್ಕೆ ಅಲ್ಲಿಯ ರಾಜ್ಯಭಾರಿಯೊಬ್ಬನ ಚಂದನದಗೊಂಬೆ
ಹೆಂಡತಿಯ ಉತ್ತರ: 'ಈ ಕಪ್ಪು ಕೇರಳೀಯರಿಗೆ ಹಾಗೂ ಪಾಕಿಸ್ತಾನದ
ಅಸಂಸ್ಕೃತ ಪಠಾಣರಿಗೆ ಯೋಗ್ಯತೆಗೆ ಮೀರಿ ಇಲಿ ಹಣ ಸಿಗುತ್ತಿಲ್ಲವೇ?'
ಇಂದು ನಮ್ಮ ದೇಶದಲ್ಲಂತೂ
ರಕ್ಕಸರ ಕೈಯಲ್ಲಿ ಮನುಷ್ಯತ್ವದ ಮೇಲೆ ಸಾಗಿದ ಅವಮಾನಕ್ಕೆ ಇಲ್ಲ ಆಳ.
ನಾಳೆ ಇಂದಿಗಿಂತಲೂ ಕರಾಳ.
ಆದರೂ ಹೇಳುತ್ತೇನೆ, ಈ ಬಾಳೊಂದು ರಮ್ಯಕಾಣಿಕೆ.
ನಾಳೆ ಪೃಥ್ವಿಯ ಮೇಲೆ ಪ್ರತಿಯೊಬ್ಬ ಮನುಷ್ಯನೂ ಸೂರ್ಯನಾಗಿ
ಬಾಳುವಂತಾಗಲು
ಇಂದು ಕತ್ತಲೆಯ ವಿರುದ್ಧದ ಹೋರಾಟದ ಬಾಳು ರಮ್ಯವಲ್ಲವೇ?
ನಾಳೆಯ ಶ್ರೇಷ್ಠ ಸಮಾಜ ಇಂದಿನ ಹೀನಾಯದ ವಿರುದ್ಧ ಹೋರಾಡದೇ
ಅಸಾಧ್ಯವಾದ್ದರಿಂದ
ಈ ಹೋರಾಟಗಾರರೂ ಶ್ರೇಷ್ಠರಲ್ಲವೇ?
ಈ ಹೋರಾಟದಲ್ಲಡಗಿದ ಅಂತರರಾಷ್ಟ್ರೀಯ ಪ್ರೇಮ, ಬಂಧುತ್ವಗಳ ಬಿಸಿ
ರಕ್ತದ ಅನುಭವ ರಮ್ಯವಲ್ಲವೇ?
ಅಂತೆಯೇ ಶೋಷಿತನೇ, ಎಷ್ಟೇ ಅಣಕಕ್ಕೀಡಾಗಿದ್ದರೂ ನೀನು ಶ್ರೇಷ್ಠ.
ಇತಿಹಾಸ ನಿನಗಾಗಿ ಆತುರದಿಂದ ಕಾಯುತ್ತಿರುವ ಪ್ರೀತಿಪುತ್ರ ನೀನು.
ಬಂಧಿತ ಇತಿಹಾಸದ ಸರಪಳಿಗಳನ್ನು
ಹಾಗೂ ನಿನ್ನ ಸ್ವಂತದ ಸರಪಳಿಗಳನ್ನು
ಕಡಿದುಹಾಕಲು ಇತಿಹಾಸವೇ ನಿನಗಿತ್ತ
ಶಸ್ತ್ರಕಾಣಿಕೆ ಇದು–ನಿನ್ನ ಬಾಳು.

—ಸುಧೀಂದ್ರ ಕುಲಕರ್ಣಿ

ತೆಲಂಗಾಣಾ ಸ್ಥಳೀಯ ಹೋರಾಟ ವಾಪಾಸು ಪಡೆದ 30 ವರ್ಷಗಳ ನಂತರ

ತೀವ್ರ ಭೂಸುಧಾರಣೆ ಇನ್ನೂ ಪ್ರಮುಖ ಪ್ರಶ್ನೆ

ತೆಲಂಗಾಣಾದಲ್ಲಿನ ಚಾರಿತ್ರಿಕ ಸ್ಥಳೀಯ ರೈತ ಹೋರಾಟವನ್ನು ಹಿಂತೆಗೆದುಕೊಳ್ಳುವ ನಿರ್ಧಾರವನ್ನು 30 ವರ್ಷಗಳ ಹಿಂದೆ 1951ರ ಅಕ್ಟೋಬರ್ 20ರಂದು ಕೈಗೊಳ್ಳಲಾಗಿತ್ತು. 1951ರ ಅಕ್ಟೋಬರ್ 21ರಂದು ಅದನ್ನು ಸಾರ್ವಜನಿಕರಿಗೆ ಹಾಗೂ ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಯಿತು. ಅಂದೇ ಆಕಾಶವಾಣಿ ಅವನ್ನು ಪ್ರಸಾರ ಮಾಡಿತು.

1946ರ ಜುಲೈ 24ರಂದು ನಿಜಾಮನ ಪೋಲೀಸ್ ಮತ್ತು ಸೇನೆ, ರಜಾಕಾರರ ಸಶಸ್ತ್ರ ಮಂದೆಗಳು ಹಾಗೂ ದೇಶಮುಖ್ ಮತ್ತು ಭೂಮಾಲಕರ ಗೂಂಡಾ ಗ್ಯಾಂಗ್‌ಗಳ ಪ್ರಾಣ ಘಾತಕ ಹಲ್ಲೆಗಳನ್ನು ಎದುರಿಸುವ ಪ್ರಕ್ರಿಯೆಯಲ್ಲಿ ತೆಲಂಗಾಣಾದ ರೈತಾಪಿ ವರ್ಗ ಆರಂಭಿಸಿದ ಸಶಸ್ತ್ರ ಹೋರಾಟ ನಂತರ ಹೊಸದಾಗಿ ಸ್ಥಾಪಿತವಾದ, ರಾಜಕೀಯವಾಗಿ ಸ್ವತಂತ್ರವಾದ ಭಾರತದ ಪ್ರಭುತ್ವ ಹಾಗೂ ಸರಕಾರ 1948ರ ಸೆಪ್ಟೆಂಬರ್ 13ರ ಪೋಲೀಸ್ ಕ್ರಮದ ನಂತರ ಹರಿಯಬಿಟ್ಟ ಪೋಲೀಸ್-ಸೈನಿಕ ದಾಳಿಯ ವಿರುದ್ಧ ಸಶಸ್ತ್ರ ಸ್ಥಳೀಯ ಹೋರಾಟವಾಗಿ ಪರಿವರ್ತನೆಗೊಂಡಿತು.

ರೈತ-ವಿರೋಧೀ ಮಧ್ಯ ಪ್ರವೇಶ

ನಿಜಾಮನ ಸಶಸ್ತ್ರ ಮಂದೆಗಳು ಸಾವಿರಾರು ಮಹಿಳೆಯರ ಅತ್ಯಾಚಾರ ನಡೆಸುತ್ತಿದ್ದಾಗ, ಅವರನ್ನು ಹಿಂಸೆಗೊಳಪಡಿಸುತ್ತಿದ್ದಾಗ, ನೂರಾರು ಹಳ್ಳಿಗಳ ಲೂಟಿ ನಡೆಸುತ್ತಿದ್ದಾಗ, ನೂರಾರು ರೈತ ಹೋರಾಟಗಾರರು ಹಾಗೂ ಅವರ ನಾಯಕರ ಕೊಲೆಯಾಗುತ್ತಿದ್ದಾಗ ತೆಲಂಗಾಣಾದ ರೈತರ ಜೀವ ಹಾಗೂ ಹಕ್ಕುಗಳ ರಕ್ಷಣೆಗಾಗಿ ಒಂದು ಕಿರಿ ಬೆರಳನ್ನೂ ಹೊಸ ಭಾರತೀಯ ಸರಕಾರ ಎತ್ತಲಿಲ್ಲ. ಆದರೆ ಯಾವಾಗ ಈ ಸ್ಥಳೀಯ ರೈತ ಹೋರಾಟ ಬೆಳೆಯುತ್ತಾ ಹೋಗಿ 3000 ಹಳ್ಳಿಗಳು ವಿಮೋಚನೆಗೊಂಡು ಹತ್ತು ಲಕ್ಷ ಎಕರೆ ಜಮೀನನ್ನು ಭೂಹೀನರು ಹಾಗೂ ಹಳ್ಳಿಯ ಬಡವರಲ್ಲಿ ಹಂಚಲಾಯಿತೋ, ದುಷ್ಟ ಜಮೀನ್ದಾರಿಕೆಯ ವಿರುದ್ಧ ದಂಗೆಯೇಳಲು ಭಾರತದ ಕೋಟಿಗಟ್ಟಲೆ ದಲಿತ ರೈತರಿಗೆ ಈ ಹೋರಾಟ ಪ್ರೇರಣೆ ಕೊಡಲಾರಂಭಿಸಿತೋ ಆಗ ಭಾರತದ ಹೊಸ ಆಳರಸರು ಕಂಗಾಲಾಗಿ ಹೈದರಾಬಾದಿನೊಳಗೆ ಪ್ರವೇಶಿಸುವಂತೆ ಸೇನೆಗೆ ಆಜ್ಞೆಯಿತ್ತರು. ನಿಜಾಮು ಬೇಷರತ್ ಶರಣಾಗಲು ಇಪ್ಪತ್ತಾಲ್ಕು ಗಂಟೆಗಳೂ ಬೇಕಾಗಲಿಲ್ಲ. ಆತನ ಎಲ್ಲಾ ರಜಾಕಾರ್ ಪಡೆಗಳೂ ತಮ್ಮ ಶಸ್ತ್ರ ಸರಂಜಾಮುಗಳನ್ನು ಇದ್ದಲ್ಲೇ ಬಿಟ್ಟು ಕಾಲಿಗೆ ಬುದ್ಧಿ ಹೇಳಿದರು.

ಸೇನೆಯ "ವಿಮೋಚನಾ" ಕಾರ್ಯ ಒಂದು ವಾರದೊಳಗೇ ಮುಗಿಯಿತು. ಅದರ ನಂತರ ಇನ್ನೊಂದು "ವಿಮೋಚನೆ" ಆರಂಭವಾಯಿತು. ಇದು ಭೂಮಾಲಕರು, ಜಾಗೀರದಾರರು, ದೇಶಮುಖರು ಹಾಗೂ ನಿಜಾಮನ ಇತರ ದಾಸರನ್ನು "ವಿಮೋಚನೆಗೊಳಿಸುವ ಜತೆಗೇ ತೆಲಂಗಾಣಾ ರೈತಾಪಿ ವರ್ಗ ಬೆವರು ಸುರಿಸಿ ಸಾಧಿಸಿದುದನ್ನು ಇಲ್ಲಗೊಳಿಸುವ ಕಾರ್ಯ. ರೈತಾಪಿ ವರ್ಗ ಭೂಮಾಲಿಕರಿಗೆ ಜಮೀನು ಹಿಂತಿರುಗಿಸಬೇಕು, ಇಲ್ಲವಾದರೆ ತಕ್ಷಣ ತೀವ್ರಕ್ರಮ ಎದುರಿಸಬೇಕಾಗಬಹುದೆಂದು ಬೆದರಿಸುವ ಕರಪತ್ರಗಳನ್ನು ವಿಮಾನದಿಂದ ಉದುರಿಸಲಾಯಿತು. ಸುಮಾರು 45-50 ಸಾವಿರ ಪೋಲೀಸರು, ವಿಶೇಷ ಪೋಲೀಸರು ಹಾಗೂ ಸೇನೆ ಕ್ರಮ ಆರಂಭಿಸಿ ತೆಲಂಗಾಣಾ ರೈತರ ಮೇಲೆ ಯುದ್ಧವನ್ನೇ ಸಾರಿದವು. ಇದು 3 ವರ್ಷ ಕಾಲ ನಡೆಯಿತು. ವರ್ಷದಿಂದ ವರ್ಷಕ್ಕೆ ಇದು ರಾಕ್ಷಸೀ ಹಾಗೂ ನಿರ್ದಯ ಸ್ವರೂಪ ಪಡೆಯಿತು. ಸಾವಿರಾರು ಮಹಿಳೆಯರ ಮಾನಾಪಹರಣವಾಯಿತು. ಹತ್ತು ಸಾವಿರ ಸಮರಶೀಲ ರೈತರು ಹಾಗೂ ಅವರ ನಾಯಕರನ್ನು ಬಂಧಿಸಿ ಹಿಂಸಿಸಲಾಯಿತು. ಎರಡು ಸಾವಿರ ಸಶಸ್ತ್ರ ಹೋರಾಟಗಾರರು ಹಾಗೂ ಕಮ್ಯುನಿಸ್ಟರನ್ನು ತೀವ್ರವಾಗಿ ಹೊಡೆದು ಕೊಲ್ಲಲಾಯಿತು. ಸಾವಿರಾರು ಹಳ್ಳಿಗಳು ಪೋಲೀಸ್ ಹಾಗೂ ಸೇನೆಯ ಠಾಣೆಗಳಾದವು.

ಭೂಮಾಲಕ ಹಿತಾಸಕ್ತಿಗಳ ರಕ್ಷಕರು

ಹೊಸ ಭಾರತೀಯ ಪ್ರಭುತ್ವ ಹಾಗೂ ಸರಕಾರದ ವರ್ಗ ಸ್ವಭಾವದ ಬಗ್ಗೆ ಅನಗತ್ಯವೆನಿಸುವಷ್ಟು ಸೂಕ್ಷ್ಮವಾದ ವಿಶ್ಲೇಷಣೆಯಲ್ಲಿ ಇನ್ನೂ ತೊಡಗಿರುವ ನಮ್ಮ ದೇಶದ ಹಾಗೂ ಹೊರಗಿನ ರಾಜಕೀಯ ಪಂಡಿತರು ಒಂದು ಸಾವಿರದ ಮುನ್ನೂರು ದಿನಗಳ ರೈತವಿರೋಧೀ ಕ್ರಮಗಳಲ್ಲಿ ತೊಡಗಿದ್ದ ಭಾರತೀಯ ಸೇನೆ ಹಾಗೂ ಪೋಲೀಸ್ ಬರೆದ ಸಾವಿರಾರು ಪುಟಗಳಲ್ಲಿ ಒಂದನ್ನಾದರೂ ಓದಲಿ. ಆ ಪ್ರಭುತ್ವ ಬೂರ್ಜ್ವಾ-ಭೂಮಾಲಿಕರದ್ದೋ, ಬೂರ್ಜ್ವಾ ಮಾತ್ರವೋ ಎಂದು ಅವರಿಗೇ ತಿಳಿಯುವುದು.

ಹೊಸ ಆಳುವ ವರ್ಗಗಳು ಜಮೀನುದಾರರು ಹಾಗೂ ಇತರ ಆಸ್ತಿವಂತ ವರ್ಗಗಳನ್ನು ಹೇಗಾದರೂ ರಕ್ಷಿಸಬೇಕೆನ್ನುವವರು. ಅವರು ತಮ್ಮ ನಿಜಬಣ್ಣವನ್ನು ತೆಲಂಗು ರೈತರ ಮೇಲೆ ರಕ್ತಪಾತ ನಡೆಸಿ ತೋರಿಸಿಕೊಂಡಿದ್ದಾರೆ. ಈ ರೈತರಲ್ಲಿ ತೆಲಂಗಾಣಾದ ರೈತರು ಮಾತ್ರವಲ್ಲ ಅವರ ಹೋರಾಟ ಕಾಲದಲ್ಲಿ ಹೋರಾಟದಲ್ಲಿ ಭಾಗವಹಿಸಿದ ತೆಲಂಗಾಣದ ಹೊರಗಿನ ರೈತರೂ ಇದ್ದರು. ಇದೇನು ನಮ್ಮ ತೀರ್ಪಲ್ಲ. ಮಾರ್ಚ್ 1952ರಲ್ಲಿ ಜನತೆಯನ್ನು ಕೇಳಿದಾಗ ಅವರು ಕೊಟ್ಟ ತೀರ್ಪಿದು.

ನಲ್‌ಗೊಂಡಾ, ಕಮ್ಮಂ, ವಾರಂಗಲ್ ಹಾಗೂ ಕರೀಂನಗರ ಜಿಲ್ಲೆಗಳು ಸ್ಥಳೀಯ ಹೋರಾಟದ ಕೇಂದ್ರಗಳಾಗಿದ್ದವು. ಈ ಕ್ಷೇತ್ರಗಳಲ್ಲಿ ಕಮ್ಯುನಿಸ್ಟ್ ಪಕ್ಷ ಹಾಗೂ ಜನತಾ ಪ್ರಜಾಪ್ರಭುತ್ವವಾದೀ ರಂಗ ನಾಲ್ಕು ಸ್ಥಾನಗಳನ್ನು ಬಿಟ್ಟು ಬೇರೆಲ್ಲಾವನ್ನೂ ಗೆದ್ದುಕೊಂಡವು. ಪೋಲೀಸ್ ಹಿಂಸಾಚಾರ ಹಾಗೂ ನೂರಾರು ಸಮರಶೀಲ ಕಮ್ಯುನಿಸ್ಟರ ಹತ್ಯೆ ನಡೆದಿದ್ದ ಪಕ್ಕದ ಆಂಧ್ರ ಜಿಲ್ಲೆಗಳಲ್ಲೂ ಕಾಂಗ್ರೆಸ್ ಪಕ್ಷದ ಸ್ಥಿತಿ ಇದಕ್ಕಿಂತ ಉತ್ತಮವಿರಲಿಲ್ಲ. 1952ರ ಸಾರ್ವತ್ರಿಕ ಚುನಾವಣೆಗಳಲ್ಲಿ ಯಾವ ಕಾಂಗ್ರೆಸ್ ಮಂತ್ರಿಯಾಗಲೀ ಅಥವಾ ಆಂಧ್ರ ಕ್ಷೇತ್ರದ ಕಾಂಗ್ರೆಸ್‌ನ ಯಾವುದೇ ದೊಡ್ಡ ನಾಯಕನಾಗಲೀ ಚುನಾಯಿತವಾಗಲಿಲ್ಲ. ಲೋಕಸಭೆಯ ಕಮ್ಯುನಿಸ್ಟ್ ಗುಂಪಿನ 29 ಸದಸ್ಯರಲ್ಲಿ 19 ಸದಸ್ಯರು ಆಂಧ್ರ ಹಾಗೂ ತೆಲಂಗಾಣದಿಂದಲೇ ಚುನಾಯಿತರಾದರು. ಕಮ್ಯುನಿಸ್ಟರು ದರೋಡೆ ನಡೆಸಿದ್ದಾರೆ, ಕೊಲೆನಡೆಸಿದ್ದಾರೆ ಇತ್ಯಾದಿಯಾಗಿ ಸರಕಾರೀ ಹತೋಟಿಯಲ್ಲಿನ ಆಕಾಶವಾಣಿ ಹಾಗೂ ದೊಡ್ಡ ಬೂರ್ಜ್ವಾಗಳ ಹತೋಟಿಯಲ್ಲಿರುವ ಪತ್ರಿಕೆಗಳ ಮೂಲಕ ಸರಕಾರ ನಡೆಸಿದ ಕೊಳಕು ಸುಳ್ಳು ಅಪಪ್ರಚಾರಗಳಿಗೆ ಮತದಾರರೇ ಸರಿಯಾದ ಉತ್ತರಕೊಟ್ಟರು. ಕಾಂಗ್ರೆಸ್ ಅಭ್ಯರ್ಥಿಗಳನ್ನು ಸೋಲಿಸಿ, ಬಹುಸಂಖ್ಯೆಯಲ್ಲಿ ಹಾಗೂ ಅಗಾಧ ಅಂತರದಿಂದ ಕಮ್ಯುನಿಸ್ಟರನ್ನು ಜನತೆ ಚುನಾಯಿಸಿತು.

ಜನರಿಗೆ ಮೋಸ

ಭೂಧಾನ ಹಗರಣ ಏನಾಯಿತು? ಅಹಿಂಸೆ, ರಾಮರಾಜ್ಯ, ದರಿದ್ರನಾರಾಯಣ ಇತ್ಯಾದಿ ಉದ್ದೇಶಗಳಿಗೆ ತಮ್ಮನ್ನು ಅರ್ಪಿಸಿಕೊಂಡ ಗಾಂಧಿವಾದೀ ಶಿಷ್ಯರು ಬಹಳಷ್ಟು ಪ್ರಚಾರ ಮಾಡಿದ ಹಾಗೂ ಬಹಳ ಸಲ ಆಶ್ವಾಸನೆ ನೀಡಿದ್ದ ಭೂಸುಧಾರಣೆಗಳ ಗತಿ ಏನಾಯಿತು? ಇದನ್ನು ನೋಡಲು ಕಣ್ಣಿದ್ದವರಿಗೆ ಬೇರೆ ಹೇಳಬೇಕಾಗಿಲ್ಲ. ಹೋರಾಟದ ಸಮಯದಲ್ಲಿ ರೈತಾಪಿವರ್ಗಕ್ಕೆ ಹಂಚಿದ ಹತ್ತು ಲಕ್ಷ ಎಕರೆ ಜಮೀನು ದೇಶದಲ್ಲಿ ಹಾಗೂ ಹೈದರಾಬಾದಿನಲ್ಲಿ ರಾಜಕೀಯ ಅಧಿಕಾರವನ್ನು ಕಾಂಗ್ರೆಸ್ ವಹಿಸಿಕೊಂಡ ಮೇಲೆ ಎಲ್ಲಿಗೆ ಹೋಯಿತು? ತೆಲಂಗಾಣಾದ ಹಳ್ಳಿಗೆ ಹೋಗುವ ಯಾರೇ ಆದರೂ ಗ್ರಾಮ ಪಂಚಾಯತುಗಳಲ್ಲಿ, ಪಂಚಾಯತ್ ಸಮಿತಿಗಳಲ್ಲಿ, ಜಿಲ್ಲಾ ಪರಿಷತ್‌ಗಳಲ್ಲಿ ಸಹಕಾರಿ ಬ್ಯಾಂಕ್ ಇತ್ಯಾದಿಗಳಲ್ಲಿ ಜಮೀಂದಾರಿಕೆ ಇನ್ನೂ ಮೆರೆಯುತ್ತಿರುವುದನ್ನು ಕಾಣಬಹುದು. ಜಮೀಂದಾರರು ಎಂ.ಪಿ.ಗಳು, ಎಂ.ಎಲ್.ಎ.ಗಳು ಹಾಗೂ ಮಂತ್ರಿಗಳಾಗಿದ್ದಾರೆ. ಅವರ ಮಕ್ಕಳು, ಅಳಿಯಂದಿರು ಐ.ಎ.ಎಸ್., ಐ.ಎಫ್.ಎಸ್., ಐ.ಪಿ.ಎಸ್., ನ್ಯಾಯಾಂಗ ಇತ್ಯಾದಿಗಳಲ್ಲಿ ಸಿಂಹಪಾಲು ಪಡೆದಿದ್ದಾರೆ.

ಸಮಾಜವಾದೀ ಮಾದರಿಯ ಸಮಾಜ ಕಟ್ಟಬೇಕೆನ್ನುವ ಆವಡಿ ಠರಾವು, ಕೃಷಿ ಸುಧಾರಣೆಗಳನ್ನು ಪೂರ್ಣಗೊಳಿಸಿ ಕೃಷಿಯನ್ನು ಸಹಕಾರೀ ತತ್ವದ ಮೇಲೆ ನಡೆಸಬೇಕೆನ್ನುವ ನಾಗಪುರ ಹಾಗೂ ಭುವನೇಶ್ವರ ಠರಾವುಗಳು, ಗರೀಬಿ ಹಟಾವೋ ಘೋಷಣೆ ಹಾಗೂ ಇಪ್ಪತ್ತಂಶದ ಕಾರ್ಯಕ್ರಮ—ನಮ್ಮ 'ಗಾಂಧಿವಾದೀ ಸಮಾಜವಾದಿಗಳ' ಮತ್ತು 'ಪ್ರಜಾತಾಂತ್ರಿಕ ಸಮಾಜವಾದಿಗಳ' ಈ ಎಲ್ಲಾ ಠರಾವುಗಳೂ ಗೋಸುಂಬೆತನದ ಹಾಗೂ ಸುಳ್ಳು ಕ್ರಮಗಳಾಗಿದ್ದು ರೈತ ಜನತೆಯನ್ನು ವಂಚಿಸಿ ಜಮೀಂದಾರಿಕೆಯನ್ನು ಶಾಶ್ವತಗೊಳಿಸುವುದೇ ಅವೆಲ್ಲದರ ಉದ್ದೇಶವಾಗಿತ್ತೆಂದು ಈಗ ಸಿದ್ಧವಾಗಿದೆ.

ಸರಿಯಾಗಿ ಸಂಘಟಿತರಾಗಿರದ, ಸಾಕಷ್ಟು ಶಸ್ತ್ರಗಳಿಲ್ಲದ ಹಾಗೂ ತೆಲಂಗಾಣಾದ ಮೂರು ಜಿಲ್ಲೆಗಳಿಗೆ ಮಾತ್ರ ಸೀಮಿತರಾಗಿದ್ದ ರೈತರೊಂದು ಕಡೆ, ನಿಜಾಮನ ಹಾಗೂ ಭಾರದ ಸಂಘದ ಸುಸಜ್ಜಿತ ಸೇನೆ ಹಾಗೂ ಪೋಲೀಸ್ ಇನ್ನೊಂದೆಡೆ-ಇವರಿಬ್ಬರ ನಡುವಿನ ಐದು ವರ್ಷಗಳ ಅಸಮಾನ ಸಶಸ್ತ್ರ ಕದನದ ನಂತರ ಈ ಸ್ಥಳೀಯ ರೈತ ಹೋರಾಟವನ್ನು ಹಿಂತೆಗೆದುಕೊಳ್ಳಬೇಕಾಗಿ ಬಂದು ಪೂರ್ಣ ಮೂವತ್ತು ವರ್ಷಗಳು ಕಳೆದು ಹೋಗಿವೆ. ಹೋರಾಡುತ್ತಿದ್ದ ರೈತರು ಕಟ್ಟಿದ ಹತ್ತು ಸಾವಿರ ಜನರಿದ್ದ ಶಕ್ತಿಶಾಲೀ ಜನತಾ ಸೇನೆ ಹಾಗೂ ಎರಡು ಸಾವಿರ ಗೆರಿಲ್ಲಾ ಪಡೆಗಳು ಬಹಳಷ್ಟು ಶಕ್ತಿಗುಂದಿ, ಅವರ ಸಂಖ್ಯೆ 650ಕ್ಕಿಳಿದು ಸೇನೆಯು ಅವರನ್ನು ಕಾಡಿನೊಳಗೆ ಅಟ್ಟಿತ್ತು; ಜನತೆಯ ಸಂಪರ್ಕ ಹೊಂದದಂತೆ ಮಾಡಿತ್ತು. ಈ ಪ್ರತಿಕೂಲ ಪರಿಸ್ಥಿತಿಯಲ್ಲಿಯೇ ತೆಲಂಗಾಣಾದ ಸ್ಥಳೀಯ ಹೋರಾಟವನ್ನು ವಾಪಾಸು ಪಡೆಯುವ ನಿರ್ಧಾರ ಕೈಗೊಳ್ಳಲಾಗಿತ್ತು. ನಂತರ ಹೋರಾಟಗಾರರಿಗೆ ಕ್ಷಮೆ ಸಿಗುವುದು ಹಾಗೂ ರೈತರಿಗೆ ಜಮೀನನ್ನು ಕೊಡಲಾಗುವುದು ಎಂಬ ಸರಕಾರದ ವಚನವನ್ನು ಆಗ ನಂಬಲಾಯಿತು.

ಒಡಕುಂಟುಮಾಡುವ ಶಕ್ತಿಗಳು

ಇಂದು ಜಮೀಂದಾರಿಕೆ ಮುಂದುವರಿಯುತ್ತಿದೆ. ಕೆಲವೇ ಕೈಗಳಲ್ಲಿ ಜಮೀನಿನ ಕೇಂದ್ರೀಕರಣ ಮುಂದುವರಿಯುತ್ತಿದೆ. ಲಕ್ಷಗಟ್ಟಲೆ ಗೇಣಿದಾರರು ಎಲ್ಲಾ ಕಳೆದುಕೊಂಡು ಕೃಷಿ ಕಾರ್ಮಿಕರಾಗುತ್ತಿದ್ದಾರೆ. ಇವರ ಸಂಖ್ಯೆ ಭಾರತದ ಜನತೆಯ 35 ರಿಂದ 40 ಶೇಕಡಾವಿದ್ದು ಬಡತನದ ರೇಖೆಯ ಕೆಳಗೆ ಅಂದರೆ ಕುಟುಂಬದಲ್ಲಿ ತಲಾ 20ರೂ. ಗಳಿಗಿಂತಲೂ ಕಮ್ಮಿ ಮಾಸಿಕ ಆದಾಯದಲ್ಲಿ ಇವರು ಬದುಕಬೇಕಾಗಿದೆ.

ತೀವ್ರ ಭೂಸುಧಾರಣೆಯ ಘೋಷಣೆ ಹಾಗೂ ಆಶ್ವಾಸನೆಗಳು ಮೂರು ದಶಕಗಳ ಹಿಂದೆ ಯಾವ ಹಂತದಲ್ಲಿದ್ದವೋ ಇನ್ನೂ ಅಲ್ಲೇ ಇವೆ. ದಟ್ಟ ದಾರಿದ್ರ್ಯ, ಹಸಿವು, ನಿರುದ್ಯೋಗ ಹಾಗೂ ವ್ಯಾಪಕ ಪ್ರಮಾಣದಲ್ಲಿ ಅತೃಪ್ತಿ ಇವನ್ನೇ ಅವು ಸಾಧಿಸಿದ್ದು. ಇವು ಎಲ್ಲಾ ನಮೂನೆಯ ಜಾತೀವಾದಿ, ಕೋಮುವಾದಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳು ನಿಸ್ಸಂಕೋಚವಾಗಿ ಇದನ್ನು ದುರುಪಯೋಗಿಸಿಕೊಳ್ಳಲು ಇದರಿಂದ ಅವಕಾಶವಾಯಿತು. ಪ್ರಜಾಪ್ರಭುತ್ವವಾದೀ ಕೃಷಿ ಚಳುವಳಿಯನ್ನು ಛಿದ್ರಗೊಳಿಸಿ ನಾಶಗೊಳಿಸಲು ಏನು ಸಾಧ್ಯವೋ ಅವನ್ನೆಲ್ಲಾ ಮಾಡಿ ಊಳಿಗಮಾನ್ಯ ಹಾಗೂ ಸಂಕುಚಿತವಾದೀ ಶಕ್ತಿಗಳಿಗೆ ವಿಚ್ಛಿದ್ರಕಾರೀ ಹಾಗೂ ವಿಘಟನಾಕಾರೀ ಚಟುವಟಿಕೆ ನಡೆಸಲು ಅನುಕೂಲವಾದ ವಾತಾವರಣ ಕಲ್ಪಿಸಿಕೊಟ್ಟ ಶ್ರೀಮತಿ ಇಂದಿರಾಗಾಂಧಿ ಹಾಗೂ ಅವರ ಸರಕಾರ ಈಗ ದೇಶವನ್ನು ಆವರಿಸಿಕೊಂಡಿರುವ ವಿಘಟನೆಯ ಅಪಾಯದ ಬಗ್ಗೆ ಬೊಬ್ಬೆ ಹಾಕುತ್ತಿದ್ದಾರೆ. ಜಾತೀವಾದ, ಕೋಮುವಾದ, ಪ್ರತ್ಯೇಕತಾವಾದ ಇತ್ಯಾದಿ ಎಲ್ಲಾ ನಮೂನೆಯ ಸಾಮಾಜಿಕ ವಿಚ್ಛಿದ್ರಕಾರೀ ಚಟುವಟಿಕೆ ಬೆಳೆದು ಮುಂದುವರಿಯಲು ಅವಕಾಶ ಮಾಡಿಕೊಡುವ ಊಳಿಗಮಾನ್ಯ ಹಾಗೂ ಅರೆ-ಊಳಿಗಮಾನ್ಯ ಪ್ರತಿಕ್ರಿಯಾವಾದಿಗಳನ್ನು ಜಾಗರೂಕತೆಯಿಂದ ಹಾಗೂ ಬುದ್ಧಿಪೂರ್ವಕವಾಗಿ ಸಾಕಿಸಲಹಿದ ಕಾಂಗ್ರೆಸ್ ಪಕ್ಷ ಹಾಗೂ ಸರಕಾರ ಈಗ ರಾಷ್ಟ್ರೀಯ ಭಾವೈಕ್ಯತೆ, ಭಾರತ ಸಂಘದ ಐಕ್ಯತೆ ಹಾಗೂ ಸಮಗ್ರತೆ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿವೆ. ನಮ್ಮ ದೇಶದ ಬೂರ್ಜ್ವಾ ವರ್ಗ ಕೃಷಿವಲಯದ ಭೂಮಾಲಕ ಹಿತಾಸಕ್ತಿಗಳೊಂದಿಗೆ ಸೇರಿಕೊಂಡು ವಿದೇಶೀ ಸಾಮ್ರಾಜ್ಯಶಾಹೀ ಬಂಡವಾಳಿಗರೊಂದಿಗೆ ಸಹಕರಿಸಿ ಭಾರತದಲ್ಲಿ ಒಂದು ಬೂರ್ಜ್ವಾ-ಪ್ರಜಾಪ್ರಭು

[ಕಡೇ ಪುಟ ನೋಡಿ]

-ಎನ್ವೈ

ಕರ್ನಾಟಕ ರಾಜ್ಯದಲ್ಲಿ

ಬಂಡವಾಳಶಾಹಿ ಪಥದ ಹುಚ್ಚರಾಸ್ಪತ್ರೆಗಳು

ಬೆಳ್ತಂಗಡಿ ತಾಲೂಕಿನ 30ಗ್ರಾಮಗಳ ಒಟ್ಟು 106 ಕ್ರಿಶ್ಚನ್ ಹಾಗೂ ಮುಸ್ಲಿಂ ಕುಟುಂಬಗಳು ಹಿಂದೂ ಧರ್ಮಕ್ಕೆ ಸಾಮೂಹಿಕವಾಗಿ ಮತಾಂತರ ಹೊಂದಿದವು. ಹಿಂದೂ ಧರ್ಮ ಸ್ವೀಕರಿಸಿದ 603 ಜನರಿಗೆ ಪೇಜಾವರ ಮಠದ ಶ್ರೀಗಳು ಅನುಗ್ರಹ ಮಾಡಿದರು. ಕೆಲವು ವಾರಗಳ ಹಿಂದೆ 74 ಕ್ರಿಶ್ಚನ್ ಕುಟುಂಬಗಳು ಹಿಂದೂ ಧರ್ಮ ಸ್ವೀಕರಿಸಿದ್ದವು. ಮಂಗಳೂರಿನಿಂದ ಪ್ರಕಟವಾದ ಸುದ್ದಿ.

ಈ ವರ್ಷದ ಪ್ರಾರಂಭದಲ್ಲಿ ತಮಿಳುನಾಡಿನ ಮೀನಾಕ್ಷಿಪುರಂನಲ್ಲಿ ಹಿಂದೂ ಕುಟುಂಬಗಳು ಮುಸ್ಲಿಂ ಧರ್ಮ ಸ್ವೀಕಾರ ಮಾಡಿದ ಸುದ್ದಿ ಪ್ರಕಟವಾಗಿತ್ತು.

ಬಂಡವಾಳಶಾಹಿ ಆರ್ಥಿಕ ಪಥದಲ್ಲಿ ಇಂದಿರಾಗಾಂಧಿಯವರು ನಮ್ಮ ದೇಶದ ಆಡಳಿತೆಯನ್ನು ನಡೆಸುತ್ತಿರುವಾಗ ಬಡತನದ ರೇಖೆಗೊಳಗಾದ ಜನರ ಸಂಖ್ಯೆ ಏರುತ್ತಿರುವಾಗ, ಗುತ್ತೇದಾರಿ ಬಂಡವಾಳದಾರರ ಲಾಭ ಆ ಜನಸಂಖ್ಯೆಯೊಡನೆ ಪೈಪೋಟಿ ನಡೆಸುತ್ತಿರುವಾಗ, ನಿರುದ್ಯೋಗ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಬೆಲೆಯೇರಿಕೆಗಳು ತಾಂಡವವಾಡುತ್ತಿರುವಾಗ, ಹರಿಜನ-ಗಿರಿಜನರ ಮೇಲೆ ರಾಕ್ಷಸೀ ದಬ್ಬಾಳಿಕೆ, ಹೆಂಗಸರ ಮಾನಭಂಗ ದಿನನಿತ್ಯದ ಘಟನೆಗಳಾಗುತ್ತಿರುವಾಗ ಹಿಂದೂ-ಮುಸಲ್ಮಾನ ಮತಾಂತರದ ಕತೆಗಳನ್ನೂ ಓದುವ ಸುಸಂಧಿ ದೊರೆಯುತ್ತಿದೆ.

ಜರ್ಮನಿಯು ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸಲು ಅಸಮರ್ಥವಾದಾಗ ಹಿಟ್ಲರ ಯಾವ ರೀತಿ ಎರಡನೇ ಮಹಾಯುದ್ಧದ ನಾಂದಿ ಹಾಕಿದನೋ, ಹಾಗೆಯೇ ಬಂಡವಾಳಶಾಹಿ ಪಥದಲ್ಲಿ ಆಡಳಿತೆ ನಡೆಸುವ ಇಂದಿರಾ ಸರಕಾರ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಅಸಮರ್ಥವಾಗಿ ಜನರ ಲಕ್ಷ ಬೇರೆಕಡೆಗೊಯ್ಯಲು ಪ್ರಾರಂಭಿಸಿದೆ. ಅದರಲ್ಲಿ ಮತಾಂತರ ಒಂದು. ಸ್ವಾಮಿ, ಮುಲ್ಲಾಗಳ ಪಾತ್ರವೇ ಪ್ರಾಧಾನ್ಯ.

ಕ್ರಿಶ್ಚನ್ ಮಿಷಿನರಿಗಳು ಹೆಣ್ಣು-ಹೊನ್ನಿನ ಆಸೆತೋರಿಸಿ ಮತಾಂತರ ಮಾಡುತ್ತಿದ್ದರು. ಮುಲ್ಲಾಗಳು-ಸ್ವಾಮಿಗಳೆಲ್ಲ "ಕಷ್ಟ ಪರಿಹಾರಕ್ಕೆ ಈಶ್ವರ ಕೃಪೆ"ಯ ಹಸ್ತವನ್ನು ತಲೆಯ ಮೇಲಿಟ್ಟು ಮತಾಂತರ ಮಾಡುವ ಕ್ರಮದಿಂದ ಜನರ ಹೋರಾಟದ ರಕ್ತವನ್ನೇ ಹೀರುತ್ತಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ರೈತ ಸಂಘ, ಯುವಕ ಸಂಘಗಳೆಲ್ಲ ಈ ಕುತಂತ್ರದ ವಿರುದ್ಧ ತ್ವರಿತ ಚಳುವಳಿ ನಡೆಸುವುದು ಅತ್ಯಗತ್ಯ. ಮತಾಂತರ ಜನರ ಮೂಲಭೂತ ಸಮಸ್ಯೆಗಳಿಗೆ ಪರಿಹಾರವಲ್ಲ. ವರ್ಗಸಂಘಟನೆ, ವರ್ಗ ಹೋರಾಟವೇ ಅದಕ್ಕೆಲ್ಲ ಮದ್ದು ಎಂಬ ನಿಜಸಂಗತಿಯನ್ನು ಜನರಿಗೆ ತಿಳಿಸಿ ಹೇಳಿ, ಇಂಥ ಕುತಂತ್ರಗಳಿಂದ ಜನರನ್ನು ಉಳಿಸುವುದು ಅತ್ಯಗತ್ಯ. ಅಂಥಕಾರ್ಯಕ್ಕೆ ಕೈಯೊಡ್ಡೋಣ. ಜನರನ್ನು ಹುಚ್ಚರಾಸ್ಪತ್ರೆಗಳಿಂದ ಹೊರತರೋಣ.

೫೦೦ ರೂಪಾಯಿ ಕನಿಷ್ಟ ವೇತನ

ಈ ಶಿರೋನಾಮೆಯನ್ನೋದಿ ಎರಡು ರೂಪಾಯಿ ದಿನಗೂಲಿಗೆ ದುಡಿಯುವ ಕಾರ್ಮಿಕರ ಬಾಯಲ್ಲಿ ನೀರೂರಿತು. ನಾಲ್ಕು ತಿಂಗಳ ಹಿಂದೆ ಬೆಂಗಳೂರು ಮತ್ತು ಹೈದರಾಬಾದಿನಲ್ಲಿ ಸಮಾವೇಶಗೊಂಡಿದ್ದ ಇಂದಿರಾ ಕಾಂಗ್ರೆಸ್ಸಿಗೆ ಸೇರಿದ ಕಾರ್ಮಿಕ ಸಂಘಗಳ ಸಮ್ಮೇಳನದಲ್ಲಿ ಪ್ರತಿಯೊಬ್ಬ ಕೆಲಸಗಾರನಿಗೆ ಕನಿಷ್ಟ ರೂ. 500 ಕನಿಷ್ಟ ವೇತನ ಕೊಡಬೇಕೆಂಬ ನಿರ್ಣಯ ಪಾಸಾಗಿ ಸೆಪ್ಟೆಂಬರ್ 30ರಂದು ದಕ್ಷಿಣ ಭಾರತದ ರಾಜ್ಯಗಳಲ್ಲಿ ಬೇಡಿಕೆ ದಿನಾಚರಣೆಯನ್ನೂ ಆಚರಿಸಲಾಗಿತ್ತು. ಕಾರ್ಮಿಕರ ಸಂಯುಕ್ತ ಹೋರಾಟ ನಡೆಯುವಾಗ ಯಾವಾಗಲೂ ವಿರೋಧಿಸಿ, ಕೆಲಸಗಾರರ ಮೇಲೆ ಸರಕಾರ ನಡೆಸುತ್ತಿರುವ ದಬ್ಬಾಳಿಕೆಯನ್ನು ಬೆಂಬಲಿಸುತ್ತಿರುವ ಇಂದಿರಾ ಕಾಂಗ್ರೆಸ್ ಪಕ್ಷ ಮತ್ತು ಅದರ ಕಾರ್ಮಿಕ ಸಂಘಟನೆ ಈಗ ಕಾರ್ಮಿಕ ಹೋರಾಟದ ಬಿಸಿ ತಾಗಿ, ತನ್ನ ಬೆಂಬಲ ಕಾರ್ಮಿಕರಲ್ಲಿ ಇಳಿಮುಖವಾಗುತ್ತಿರುವುದನ್ನು ಕಂಡು ಹೊಸ ಘೋಷಣೆ ಮುಂದೆ ಮಾಡಿದೆ. ಕಾಂಗ್ರೆಸ್ (ಐ) ಕಾರ್ಮಿಕ ಘಟಕದ ಸಂಚಾಲಕರಾದ ವರ್ಮ ಅವರು ಈ ಬೇಡಿಕೆ ಮುಂದಿಸಿದ್ದಾರೆ.

ವಾಸ್ತವ ಪರಿಸ್ಥಿತಿ ಈ ಬೇಡಿಕೆ ಮುಂದಿಸುವಂತೆ ಮಾಡಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿರುವ ಪ. ಬಂಗಾಲ, ಕೇರಳ ಸರಕಾರಗಳು ಕಾರ್ಮಿಕರ ಸಲುವಾಗಿ ಹಲವಾರು ಸೌಲಭ್ಯಗಳನ್ನು ಒದಗಿಸಿರುವಾಗ ಅವುಗಳನ್ನು ಕಂಡು, ಕೇಳಿದ ದೇಶದ ಇತರ ಕಾಂಗ್ರೈ ಪ್ರಾಂತಗಳಲ್ಲಿಯ ದುಡಿಯುವವರೂ ಅಂಥ ಸವಲತ್ತನ್ನು ಬೇಡಲು ಪ್ರಾರಂಭಿಸಿದರು. ಚುನಾವಣೆಯಲ್ಲಿ ಕಾರ್ಮಿಕರ ಮತ ಕಳೆದುಕೊಳ್ಳಲು ಬಯಸದ ವರ್ಮ "ನಾವೂ ನಿಮಗಾಗಿ ದುಡಿಯುತ್ತೇವೆಂಬು"ದನ್ನು ತೋರಿಸಲು ಈ ಬೇಡಿಕೆಗೆ ಪ್ರಚಾರ ಒದಗಿಸಿದ್ದಾರೆ.

ಬೆಂಗಳೂರಿನ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಒಂದು ಲಕ್ಷದಷ್ಟು ಕಾರ್ಮಿಕರು ಹೆಚ್ಚಿನ ವೇತನಕ್ಕಾಗಿ 80 ದಿವಸಕ್ಕೂ ಮೇಲ್ಪಟ್ಟು ಹೋರಾಡಿದಾಗ ಇಂದಿರಾಗಾಂಧಿ ತನ್ನ ಸರಕಾರದ ಆರ್ಥಿಕ ನೀತಿಯನ್ನು ಸ್ಪಷ್ಟಪಡಿಸಿದ್ದರು. ಸಂಘಟಿತ ಕಾರ್ಮಿಕರಿಗೆ ಸಂಬಳ ಹೆಚ್ಚಳವಿಲ್ಲ. ಅತಿಪ್ರಸರಣ-ಬೆಲೆಹೆಚ್ಚಳವನ್ನು ತಡೆಯಲು ರಾಷ್ಟ್ರಮಟ್ಟದ ವೇತನ ನೀತಿ ಅಗತ್ಯವೆಂದು ಸಾರಿ ಮುಷ್ಕರ ಮುರಿದಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಪ್ರಚಾರ ದೃಷ್ಟಿಯಿಂದಷ್ಟೇ "ಕುದುರೆ ಬಾಯಿಯಿಂದ" ರೂ. 500 ಪಗಾರ ಸಿಗಬೇಕೆಂಬ ಬೇಡಿಕೆ ಹೊರಬಿದ್ದಿದೆ. ಸಂಘಟಿತ ಹೋರಾಟಕ್ಕೆ ಇದು ಹೆಚ್ಚು ಅನುಕೂಲ. ವರ್ಮ ಅವರ ಘೋಷಣೆ ಚುನಾವಣೆ ಸ್ಟಂಟೋ ಹಕೀಕತ್ತೋ ನೋಡೋಣ. ಮತ್ತೊಬ್ಬ ಕಾಂಗ್ರೈ ಮುಖಂಡ ಬರೋಟಿ ಅವರೂ ಇದೇ ಘೋಷಣೆ ಮುಂದೆ ಮಾಡಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಕೇರಳ ಸರಕಾರ ಕಟ್ಟಡ, ಕಲ್ಲುಗಣಿ ಮತ್ತು ಅಗರಬತ್ತಿ ಕಾರ್ಮಿಕರಿಗಾಗಿ ಒದಗಿಸಿರುವ ಯೋಗಕ್ಷೇಮ ಯೋಜನೆಗಳನ್ನು ಕರ್ನಾಟಕದಲ್ಲೂ ಜಾರಿಯಲ್ಲಿ ತರಬೇಕೆಂದು ಒತ್ತಾಯಿಸಿದ್ದಾರೆ. ವರ್ಮಾ-ಬರೋಟ ಪಾರ್ಟಿಯ ಕುತಂತ್ರದಿಂದ ಕೇರಳದ ನಾಯನಾರ್ ಸರಕಾರವನ್ನು ಉರುಳಿಸಲಾಯಿತು. ಕಾರ್ಮಿಕಪರ ಯೋಜನೆಗಳು ಕರ್ನಾಟಕದಲ್ಲಿ ಜಾರಿಯಾದರೆ ಗುಂಡೂರಾವ್ ಸರಕಾರ ಉಳಿದೀತೇ? ತಮ್ಮ ಬೇಡಿಕೆ ಮುಂದಿಸುವ ಮುಂಚೆ ವರ್ಮಾ-ಬರೋಟರು ತಮ್ಮಮ್ಮನ ಅಪ್ಪಣೆ ಪಡೆದಿದ್ದಾರೆಯೇ! ಎಚ್ಚರಿಕೆ.

ಹಲವಾರು ಸಮಸ್ಯೆಗಳಲ್ಲೊಂದು ರೇಷ್ಮೆ ಸಮಸ್ಯೆ

ಅಭಿವೃದ್ಧಿಗೊಳ್ಳುತ್ತಿರುವ ರಾಜ್ಯಗಳಲ್ಲಿ ಸಮಸ್ಯೆಗಳು ತಲೆ ಎತ್ತುವುದು ಸಹಜ. ಆದರೆ ಆಳುವವರ ಅಧಕ್ಷತೆ ಬಂಡವಾಳದಾರರ ಲಾಭಖೋರತನಗಳಿಂದಾಗಿ ಉಂಟಾಗುವ ಸಮಸ್ಯೆಗಳು ಬೇರೆ, ನೈಜವಾಗಿ ಎದುರಿಸಬೇಕಾದವು ಬೇರೆಯೇ. ಆಹಾರ ಧಾನ್ಯದ ಉತ್ಪಾದನೆ, ಅವುಗಳ ಬೆಲೆ, ಕಬ್ಬಿನ ಬೆಲೆ, ಹಾಲಿನ ಬೆಲೆಗಳ ನಿರ್ಧಾರ ಸಮಸ್ಯೆಗಳ ಜೊತೆಯಲ್ಲೇ, ಆಡಳಿತಾತ್ಮಕವಾಗಿಯೂ ಬಂಡವಾಳಶಾಹಿ ವ್ಯಗ್ರಹದ ಸರಕಾರ ಇಂದಿರಾ ಕೃಪ ಗುಂಡೂರಾವ್ ಸರಕಾರ ಹಲವಾರು ಸಮಸ್ಯೆಗಳನ್ನು ಎದುರು ಹಾಕಿಕೊಂಡಿದೆ. ಅಂಥ ಸಮಸ್ಯೆಗಳಲ್ಲಿ ರೇಷ್ಮೆ ಸಮಸ್ಯೆಯೂ ಒಂದು. ಕರ್ನಾಟಕ ಮೈಸೂರಾಗಿದ್ದಾಗಿನಿಂದಲೂ ಮೈಸೂರು ರೇಷ್ಮೆ ಜಗತ್ಪ್ರಸಿದ್ಧ. ಅಂಥ ಖ್ಯಾತಿ ಪಡೆದ ರೇಷ್ಮೆ ಉದ್ಯಮ ಇತರ ಉದ್ಯಮಗಳಂತೆಯೇ ಬಂಡವಾಳಶಾಹಿ ಪದ್ಧತಿಯಲ್ಲಿ ವಿವಂಚನೆಯನ್ನೆದುರಿಸಬೇಕಾಗಿ ಬಂದಿದೆ.

ರೈತರನ್ನೂ ವ್ಯಾಪಾರಸ್ಥರನ್ನೂ "ಕೋಳಿ ಕಟ್ಟ ಆಟದಲ್ಲಿ" ದೂಡಿ ತಾನು ತಮಾಷೆ ನೋಡುವ ನೀತಿಯನ್ನು ಬಂಡವಾಳಶಾಹಿ ಸರಕಾರ ಅನುಸರಿಸುತ್ತಿದೆ. ಕಾರಣ ರೈತರ ಹೋರಾಟ ನಡೆಯಿತು. ಕೊನೆಗೆ ಸರಕಾರ ಮಧ್ಯೆ ಪ್ರವೇಶಿಸಬೇಕಾಗಿ ಬಂತು. ಹಾಗೆಯೇ ರೇಷ್ಮೆ ಬೆಳೆಗಾರರು, ರೇಷ್ಮೆ ನೂಲು ಉತ್ಪಾದಕರು, ಸೀರೆ ನೇಯುವವರನ್ನು ಜಗಳದ ಬಯಲಲ್ಲಿ ನೂಕಿ ತಮಾಷೆ ನೋಡುತ್ತಿದೆ ಗುಂಡೂರಾವ್ ಸರಕಾರ.

ಕೈಮಗ್ಗ-ವಿದ್ಯುತ್ ಚಾಲಿತ ಮಗ್ಗಗಳು ಎದುರಿಸುತ್ತಿರುವ ಸಮಸ್ಯೆಯನ್ನೇ ರೇಷ್ಮೆ ನೇಕಾರರೂ ಎದುರಿಸುತ್ತಿದ್ದಾರೆ. ಸರಕಾರದ ಅನಿಶ್ಚಿತ ಧೋರಣೆ ಪರಿಸ್ಥಿತಿಯನ್ನು ಮತ್ತಷ್ಟು ಗಂಭೀರಗೊಳಿಸುತ್ತಿದೆ.

ರೇಷ್ಮೆ ಉದ್ಯಮದ ಹಿತಾಸಕ್ತಿ ಬೆಳೆಗಾರ, ನೇಕಾರ, ನೂಲುಗಾರ, ಹುರಿಗಾರ, ವರ್ತಕ ಇವರಲ್ಲಿ ಹಂಚಿ ಹೋಗಿದೆ. ಕೊನೆಗೆ ಬರುವುದು ಗ್ರಾಹಕ, ಕೊಂಡುಕೊಳ್ಳುವವ.

ರೇಷ್ಮೆ ಹುಳಕ್ಕೆ ಊಜಿನೊಣದ ಬಾಧೆಯಿಂದಾಗಿ ರೇಷ್ಮೆ ಉತ್ಪಾದನೆಗೆ ಧಕ್ಕೆ ಉಂಟಾಯಿತು. ಇದರಿಂದಾಗಿ ಬೆಲೆ ಹೆಚ್ಚಾಯಿತು. ವರ್ತಕರೂ ಸ್ವಲ್ಪ ಬೆಲೆಯೇರಿಸಿದರು. ನಿಜವಾಗಿ ಹಾನಿಯಾಗಿರುವುದು ನೇಕಾರ, ನೂಲುಗಾರ, ಹುರಿಗಾರ ಹಾಗೆಯೇ ಗ್ರಾಹಕನಿಗೆ. ಆದರೆ ಹೆಚ್ಚು ಬೊಬ್ಬಾಟ ಎಬ್ಬಿಸಿದವರು ವ್ಯಾಪಾರಸ್ಥರು ಮತ್ತು ರೇಷ್ಮೆ ಮಗ್ಗದವರು. ಅಗ್ಗದ ದರದಲ್ಲಿ ರೇಷ್ಮೆ ನೂಲು ಸಿಕ್ಕಿದರೆ ತಮಗೂ ಲಾಭ-ವ್ಯಾಪಾರಸ್ಥರಿಗೂ ಲಾಭ. ಈ ದೃಷ್ಟಿಯಿಂದ ಇವರಿಬ್ಬರೂ ನೇಕಾರರನ್ನೆಲ್ಲ ಉಪಯೋಗಿಸಿ ಮೆರವಣಿಗೆ-ಮತಪ್ರದರ್ಶನ ನಡೆಸಿದರು. ಒಂದೆರಡು ಮಗ್ಗಗಳಿರುವ ನೇಕಾರರಿಗೂ ಹಾನಿ. ಯಾಕೆಂದರೆ ದುಬಾರಿ ನೂಲು ತರಿಸಿ ನೇಯಬೇಕು. ಅದರ ಲಾಭ ವ್ಯಾಪಾರಸ್ಥರಿಗೆ ಮತ್ತು ಕಚ್ಚಾ ರೇಷ್ಮೆ ತಯಾರಕರಿಗಷ್ಟೇ.

ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಬೆಳೆಸಲು ಪ್ರೋತ್ಸಾಹ ನೀಡಲಾಗುತ್ತಿದೆ. ಕೋಲಾರ ಜಿಲ್ಲೆಯಂಥ ಕೆಲವೇ ಪ್ರದೇಶದಲ್ಲಿ ಹುಳ ಸಾಕಾಣಿಕೆ ಸ್ಥೀಮಿತವಾಗಿತ್ತು. ಕಳೆದ 8-10 ವರ್ಷಗಳಲ್ಲಿ ಬರಗಾಲ ಪೀಡಿತ ಪ್ರದೇಶಗಳಾದ ಬಿಜಾಪುರ ಮತ್ತಿನ್ನಿತರ ಜಿಲ್ಲೆಗಳಲ್ಲೂ ರೇಷ್ಮೆ ಹುಳ ಸಾಕಾಣಿಕೆ ಅಭಿವೃದ್ಧಿಗೊಳ್ಳುತ್ತಿದೆ. ಆದರೆ ಇಡೀ ರೇಷ್ಮೆ ಉದ್ಯಮ ಅಂದರೆ ರೇಷ್ಮೆ ಹುಳ ಸಾಕಾಣಿಕೆಯಿಂದ ಹಿಡಿದು ರೇಷ್ಮೆ ಸೀರೆ ಮಾರಾಟದವರೆಗಿನ ಸಮಗ್ರ ಯೋಜನೆಗೆ ಸರಿಯಾದ ಮಾರ್ಗದರ್ಶನ ಇಲ್ಲದೆ ದೇಶ ವಿದೇಶದಲ್ಲಿ ಪ್ರಖ್ಯಾತಿ ಪಡೆದ ರೇಷ್ಮೆ ಉದ್ಯಮ ಗಂಭೀರ ಸಮಸ್ಯೆಯನ್ನೆದುರಿಸುತ್ತಿದೆ.

ಚೀನಾ, ಜಪಾನ್ ರಾಷ್ಟ್ರಗಳು ಈ ಮುಂಚೆ ನಮ್ಮ ಜೊತೆಯಲ್ಲಿ ಪೈಪೋಟಿ ನಡೆಸುತ್ತಿದ್ದವು. ಈಗ ಚೀನಾ ಒಂದೇ ಈ ಉದ್ಯಮಕ್ಕೆ ಹೆಚ್ಚು ಗಮನ ಕೊಟ್ಟಿದೆ. ಉತ್ತರ ಪ್ರದೇಶದ ರೇಷ್ಮೆ ಕೇಂದ್ರ ವಾರಣಾಸಿಗೆ ಚೀನಾ ದೇಶದ ಕಚ್ಚಾ ರೇಷ್ಮೆ ಕೆ.ಜಿ.ಗೆ ರೂ. 330 ರಂತೆ ಬರುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಅದರ ಬೆಲೆ ಕೆ.ಜಿ.ಗೆ ರೂ. 600. ತೋಕ ವ್ಯಾಪಾರಸ್ಥರ ಸುಳಿಗೆ ಸಿಕ್ಕಿ ಇವರ ಬೆಲೆ ಹೆಚ್ಚು ಕಡಿಮೆಯಾಗುತ್ತಿದೆ. ಇದರಿಂದ ವ್ಯಾಪಾರಸ್ಥರನ್ನು ಬಿಟ್ಟು ಬೆಳೆಗಾರರಿಂದ ಹಿಡಿದು ನೇಕಾರರವರೆಗೆ ಎಲ್ಲರಿಗೂ ಹಾನಿಯಾಗುತ್ತಿದೆ.

ಇದರ ನಿಯಂತ್ರಣಕ್ಕಾಗಿ ಕೇಂದ್ರ ರೇಷ್ಮೆ ಮಂಡಲಿ ಇದೆ. ರೇಷ್ಮೆ ಇಲಾಖೆಯಿದೆ. ರೇಷ್ಮೆ ಮಾರಾಟ ಮಂಡಳಿಯಿದೆ. ಆದರೆ ಸರಕಾರದ ಇತರ ಖಾತೆಗಳಂತೆಯೇ ರೇಷ್ಮೆ ಖಾತೆಯಲ್ಲಿ ಕೂಡ ನಿರ್ಲಕ್ಷ್ಯತನ, ಸಾಮರಸ್ಯದ ಅಭಾವ ಕಾಣುತ್ತಿದ್ದೇವೆ.

ಊಜಿನೊಣಕ್ಕೆ ಬಲಿಯಾಗಿ ಹಾನಿಗೊಳಗಾದ ಬೆಳೆಗಾರ ಒಂದು ಕಡೆ, ದುಬಾರಿ ನೂಲು ಕೊಂಡು ತಂದು ಮಗ್ಗ ನೇಯಿಸುವ ನೇಕಾರ, ಕಡಿಮೆ ಸಂಬಳದಲ್ಲಿ ದುಡಿಯುವ ಕಾರ್ಮಿಕ, ಕೊನೆಯಲ್ಲಿ ಹೆಚ್ಚು ಲಾಭದಲ್ಲಿ ಮಾರುವ ವ್ಯಾಪಾರಿ, ಕಣ್ಣೀರು ಹರಿಸಿ ಮಗಳ ಮದುವೆಗೆ ಸೀರೆ ಕೊಂಡುಕೊಳ್ಳುವ ಗ್ರಾಹಕ ಮತ್ತೊಂದು ಕಡೆ. ಇದು ಬಂಡವಾಳಶಾಹಿ ಸರಕಾರದ ನೀತಿ. ಇದರಿಂದಾಗಿ ರೇಷ್ಮೆ ಉದ್ಯಮ ಕೆಡುತ್ತಿದೆ. ಕಾರಣ ಬೆಳೆಗಾರರೂ, ನೇಕಾರರೂ, ಕಾರ್ಮಿಕರೂ, ಗ್ರಾಹಕರೆಲ್ಲ ಸೇರಿಕೊಂಡು ನಿರ್ದಿಷ್ಟ ಧೋರಣೆಯನ್ನನುಸರಿಸುವಂತೆ ಸರಕಾರದ ಮೇಲೆ ಒತ್ತಾಯ ತರುವುದು ಅತ್ಯಗತ್ಯ.

(7ನೇ ಪುಟ ನೋಡಿ)

ಕಥೆ

ದೂರದ ತಾರೆಗಳು

–ಲೀ ನಿಂಗ್ ಖ್ಯುಯೆ

ನಾವಿಲ್ಲಿ ಮೂರು ಮಂದಿ ಇದ್ದೇವೆ–ಮೂವರು ಯುವತಿಯರು; ಬೆಟ್ಟದ ಬುಡದಲ್ಲಿರುವ ಗುಹೆಯಲ್ಲಿ ನಮ್ಮ ವಾಸ. ಈ ಗುಹೆಯ ಹೊಸ್ತಿಲಿಗೆ ಅಂಟಿಕೊಂಡೇ ರಸ್ತೆಯೊಂದು ಹಾಯುತ್ತದೆ. ಹಾವಿನಂತೆ ಬೆಟ್ಟವನ್ನು ಬಳಸಿ ಕಡೆಗೆ ಎಲ್ಲೋ ಮಾಯವಾಗುತ್ತದೆ. ಅಸ್ತವ್ಯಸ್ತವಾದ ರಸ್ತೆ-ಬಾಂಬ್ ದಾಳಿಯಿಂದ ನುಜ್ಜುಗುಜ್ಜಾಗಿದೆ. ಕೆಂಪು ಮಣ್ಣು, ಸೀಮೆ ಸುಣ್ಣದ ಬಣ್ಣದ ಡಾಂಬರು ಇದರ ಮೈಯನ್ನು ಮುಚ್ಚಿದೆ. ಹಸಿರಿನ ಛಾಯೆಯೂ ನೋಡಲಿಕ್ಕೆ ಸಿಕ್ಕುವುದಿಲ್ಲ. ಬೆತ್ತಲೆಯಾದ ಮರಗಳ ಕಾಂಡಗಳು–ಅವುಗಳಲ್ಲೂ ಸುಟ್ಟ ಕಲೆಗಳು–ಅಲ್ಲಲ್ಲಿ ಅಡ್ಡಾದಿಡ್ಡಿ ಬಿದ್ದಿವೆ. ಅವುಗಳ ಬೇರುಗಳು ಹೊರಬಂದು ಕಿತ್ತು ಬಂದ ಕರುಳಿನಂತೆ ಭಾಸವಾಗುತ್ತವೆ. ದೊಡ್ಡದೊಡ್ಡ ಬಂಡೆಗಲ್ಲುಗಳು. ಹಳೆಯ ಪೀಪಾಯಿಗಳು. ಟ್ರಕ್ ಭಾಗಗಳು ಎಲ್ಲವೂ ತುಕ್ಕು ಹಿಡಿದು ನೆಲದಲ್ಲಿ ಅರ್ಧಂಬರ್ಧ ಗೋರಿಕಂಡಿವೆ.

ನಮ್ಮ ಕೆಲಸ? ಇಲ್ಲಿ ಇರುವುದು. ಬಾಂಬ್ ಬಿದ್ದಾಗ ಹೊಟ್ಟೆಯ ಮೇಲೆ ತೆವಳುತ್ತ ಬೆಟ್ಟವನ್ನು ಏರಿ ದಾಳಿಯಿಂದ ಉಂಟಾದ ಕಂದಕಗಳನ್ನು ಎಣಿಸುವುದು. ಸಿಡಿಯದ ಬಾಂಬ್‌ಗಳನ್ನು ಪತ್ತೆಹಚ್ಚುವುದು. ಅವನ್ನು ಸ್ಫೋಟಿಸುವುದು. ನಮ್ಮನ್ನು 'ರಸ್ತೆ-ಸ್ವಯಂಸೇವಕ ದಳದವರು' ಎಂದು ಕರೆಯುತ್ತಾರೆ. ಕೇಳಿದ ತಕ್ಷಣ ಗೌರವ ಹುಟ್ಟುತ್ತೆ ಅಲ್ಲವೆ? ನಮ್ಮ ಕೆಲಸವೇನೂ ಅಷ್ಟು ಸುಲಭವಲ್ಲ. ಬಾಂಬ್ ದಾಳಿ ನಡೆದಾಗ ಎಷ್ಟೋ ಸಲ ನಾವು ನೆಲದಲ್ಲಿ ಹೂತುಹೋಗುತ್ತೇವೆ. ಆಮೇಲೆ ಗುಡ್ಡವನ್ನು ಇಳಿಯುವಾಗ ನಮ್ಮನ್ನು ನೋಡಬೇಕು–ಮುಖದ ಕಣಕಣವೂ ಮಣ್ಣಿನಲ್ಲಿ ತೊಯ್ದುಹೋಗಿ ಎರಡು ಕಣ್ಣುಗಳು ಮಾತ್ರ ಪಿಳಿಪಿಳಿ ಮಿನುಗುತ್ತವೆ. ನಕ್ಕಾಗ ಬಿಳಿ ಹಲ್ಲುಗಳ ಸಾಲು ಕಪ್ಪು ಹಿನ್ನೆಲೆಯಲ್ಲಿ ಥಾಳಾಗಿ ಕಾಣುತ್ತದೆ. ಆಗ ಒಬ್ಬರನ್ನೊಬ್ಬರು "ಕರಿದೆವ್ವ" ಅಂತ ಹಾಸ್ಯಮಾಡುತ್ತೇವೆ.

ನಮ್ಮನ್ನು ನಿಜವಾದ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾರೆ. ಆಹಾರದ ಪಾಸ್ತಾನು ತಲುಪಿದಾಗ "ನಮ್ಮ ರಸ್ತೆ ಸ್ವಯಂಸೇವಕರಿಗೆ" ಎಂದು ಅತ್ಯುತ್ತಮವಾದದ್ದನ್ನು ಎತ್ತಿಡುತ್ತಾರೆ. "ಪಾಪ ಆ ಗುಡ್ಡದ ಹತ್ತಿರ ಒಂಟಿಯಾಗಿರ್ತಾರೆ!"

ಅಲ್ಲವೆ ಮತ್ತೆ? ನಮ್ಮ ತಂಡದವರು ಇತ್ತ ಹಾಯುವುದು ಮುಸ್ಸಂಜೆಯ ಹೊತ್ತಿನಲ್ಲಿ ಮಾತ್ರ. ಒಮ್ಮೊಮ್ಮೆ ನಡುರಾತ್ರಿಯೂ ಆಗಬಹುದು. ನಾವು ಮಾತ್ರ ಹಗಲಿಡೀ ಗುಡ್ಡದ ಮೇಲೆಲ್ಲ ಅಡ್ಡಾಡುತ್ತೇವೆ. ತಮಾಷೆಯ ಮಾತಲ್ಲ. ಸಾವಿನೊಂದಿಗೆ ಎಂಥ ಸರಸ? ಸಾವು ಸದಾ ಹೊಂಚು ಹಾಕುತ್ತಿರುತ್ತದೆ–ಬಾಂಬ್ ಷೆಲ್‌ಗಳ ಗರ್ಭದಲ್ಲಿ. ನೋಡಿ, ನನ್ನ ಕಾಲಿನಲ್ಲಿ ಉಂಟಾದ ದೊಡ್ಡ ಗಾಯ ಇನ್ನೂ ಪೂರ್ಣ ಮಾಸಿಲ್ಲ. ಆಸ್ಪತ್ರೆಗೆ ಹೋಗುವ ಪ್ರಶ್ನೆಯೇ ಇಲ್ಲ. ಹತ್ತಿರ ಆಸ್ಪತ್ರೆ ಇದ್ದರಲ್ಲವೆ? ಆದರೆ ಪ್ರತಿಯೊಂದಕ್ಕೂ ಒಳ್ಳೆಯ ಮುಖವೊಂದು ಇದ್ದೇ ಇದೆಯಷ್ಟೆ? ನೀವೇ ಹೇಳಿ, ಹೊಗೆಯಾಡುವ ಭೂಮಿ, ನಡುಗುವ ಗಾಳಿ, ಹತ್ತಿರದಲ್ಲೇ ಗರ್ಜಿಸುತ್ತ ಬಾನಿನಲ್ಲಿ ಲಯವಾಗಿ ಹೋಗುವ ವಿಮಾನಗಳು–ಇವೆಲ್ಲ ಬೇರೆಲ್ಲಿ ನೋಡಲು ಸಿಕ್ಕಬೇಕು? ನರಗಳೇನು ಉಕ್ಕಿನವೆ ಆಯಾಸವಾಗದಿರಲು? ಆಗುತ್ತದೆ. ಎದೆ ಹುಚ್ಚುಹುಚ್ಚಾಗಿ ಹಾಡುತ್ತದೆ, ಕಾಲಿನ ಮುಂಡಿಗಳಲ್ಲಿ ನಡುಕ ಬರುತ್ತದೆ. ಯಾವ ಕ್ಷಣದಲ್ಲಿ ಎಲ್ಲಿ ಹುದುಗಿದ್ದ ಬಾಂಬ್ ಸಿಡಿಯುತ್ತದೋ? ಯಾವಾಗ ಆದರೇನು? ಒಮ್ಮೆ ಅದು ಸಿಡಿಯಲೇಬೇಕು. ಕಡೆಗೆ ಕೆಲಸವೆಲ್ಲ ಮುಗಿದಾಗ ಸುತ್ತಲೂ ಒಂದು ನೋಟ ಹಾಯಿಸಿ, ನಿಡಿದಾದ ಉಸಿರು ಬಿಟ್ಟು ಮತ್ತೆ ತೆವಳುತ್ತ ಗುಹೆಯೊಳಕ್ಕೆ ಸೇರಿಕೊಳ್ಳುತ್ತೇವೆ. ಹೊರಗೆ ಮೂವತ್ತು ಡಿಗ್ರಿ ಸೆಲ್ಸಿಯಸ್ ತಾಪಮಾನ. ಒಳಗಡೆ ಬೇರೆಯೇ ಆದ ಇನ್ನೊಂದು ಲೋಕ. ಚಳಿಗೆ ನಡುಗುವಂತಾಗುತ್ತದೆ. ತಲೆಯೆತ್ತಿ ಕಿತ್ತಲಿಯಿಂದ ನೀರನ್ನು ಗಟಗಟ ಕುಡಿಯುತ್ತೇವೆ. ಸಿಹಿಯಾದ ಚಿಲುಮೆಯ ನೀರು. ಒದ್ದೆಯಾದ ನೆಲದ ಮೇಲೆ ಅಡ್ಡಾಗಿ ಕಣ್ಮುಚ್ಚುತ್ತೇವೆ. ಟ್ರಾನ್ಸಿಸ್ಟರ್ ರೇಡಿಯೋ ಇಂಪಾದ ಸಂಗೀತ ಹಾಡುತ್ತದೆ. ನಮ್ಮ ಗಮನ ಒಮ್ಮೊಮ್ಮೆ ಅದರ ಕಡೆ ಹೋಗುತ್ತದೆ. ಉಳಿದ ಹೊತ್ತೆಲ್ಲ ಕನಸು ಕಾಣುತ್ತ ಮಲಗಿರುತ್ತೇವೆ.

ಭಾರೀ ಕದನವೊಂದು ಆರಂಭವಾಗಲಿದೆಯಂತೆ. ರಾತ್ರಿಯಿಡೀ ಅಡೆತಡೆ ಇಲ್ಲದೆ ವಾಹನಗಳು ಸಾಲುಸಾಲಾಗಿ ಹರಿದುಹೋಗುತ್ತವೆ. ಹಿಂದೆಲ್ಲ ರಾತ್ರಿ ನಿದ್ದೆ ಬರುತ್ತಿತ್ತು. ಈಗಿಲ್ಲ. ಹೊರಬಂದು ಮಣ್ಣು ಗೋರುತ್ತ ಹಾಯುವ ಟ್ರಕ್ ಚಾಲಕರೊಂದಿಗೆ ಚಟಾಕಿ ಹಾರಿಸಿ ನಗುತ್ತೇವೆ. ನಾವು ಎಂದರೆ ಮೂವರೂ ಅಲ್ಲ. ಒಬ್ಬಳು ಒಳಗೇ ಉಳಿಯಬೇಕು–ಟೆಲಿಫೋನ್ ಬಳಿ.

ಮಧ್ಯಾಹ್ನ, ಅಪರೂಪದ ಶಾಂತಿ. ನಾನು ಗವಿಯ ಬಂಡೆಗಳಲ್ಲೊಂದಕ್ಕೆ ಒರಗಿಕೊಂಡು ಕೂರುತ್ತೇನೆ. ಮೆಲ್ಲನೆ ಹಾಡೊಂದನ್ನು ಗುಣುಗುಣಿಸುತ್ತೇನೆ. ಹಾಡುವುದು ನನಗಿಷ್ಟ. ಯಾವುದೋ ರಾಗ ಕುರುಕುತ್ತ ನಾನೇ ಪದ ಜೋಡಿಸುತ್ತೇನೆ.

ನಾನು ಹನಾಯ್‌ಯವಳು. ಅಂಥ ಕುರೂಪಿಯಲ್ಲ. ಮೃದುವಾದ ದಟ್ಟ ಕೂದಲು; ನೀಳವಾದ ಕತ್ತು. ಕಣ್ಣುಗಳು... ಟ್ರಕ್ ಚಾಲಕರು ಅಂತಾರೆ: "ಎಷ್ಟು ದೂರದ ನೋಟ!"

ದೂರದ ನೋಟವೆ? ಎಷ್ಟು ದೂರ-ಎಲ್ಲಿಯವರೆಗೆ? ನಿಜ ಹೇಳಬೇಕು ಅಂದರೆ ನನ್ನ ಕಣ್ಣುಗಳನ್ನು ಕನ್ನಡಿಯಲ್ಲಿ ನೋಡಿಕೊಳ್ಳುವುದೇ ನನಗೊಂದು ಮೋಜು. ಬಾದಾಮಿಯ ಆಕಾರ. ಕಪ್ಪು ಪಾಪೆಗಳು. ಬಿಸಿಲಿನಲ್ಲಿ ಸಂಕುಚಿತಗೊಂಡಂತೆ ಕೊಂಚ ಕಿರಿದಾದ ರೆಪ್ಪೆಗಳು.

ಈ ಟ್ರಕ್ ಚಾಲಕರು, ತಂಡದ ಇತರ ಕೆಲಸಗಾರರು, ಇವರೆಲ್ಲ ಮೂರನೆಯವರ ಮೂಲಕವೋ ಉದ್ದುದ್ದ ಪತ್ರಗಳ ಮುಖೇನವೋ ನನ್ನ ಬಗ್ಗೆ ತಿಳಿದುಕೊಳ್ಳಲು ಬಯಸುತ್ತಾರೆ. ಯಾಕೋ? ಅಲ್ಲ, ನಾವೇನು ಊರುಮಾರು ದೂರದಲ್ಲಿದ್ದೇವಾ? ದಿನಾಲೂ ಈ ಕಡೆಯೇ ಹಾದು ಬರಬೇಕು ಅವರು. ಮುಖಕ್ಕೆ ಮುಖ ಕೊಟ್ಟು ಮಾತಾಡಬಹುದು. ನಿಜ; ನಾನು ಹಾಗೆ ಮುಂಬರಿದು ಹೋಗುವ ಸ್ವಭಾವದವಳಲ್ಲ. ನನ್ನ ಸಂಗಡಿಗರಿಬ್ಬರೂ ಸಾತ್ವಿಕ ಡ್ರೈವರ್ ಒಬ್ಬನೊಂದಿಗೆ ಹರಟೆ ಕೊಚ್ಚುವಾಗ ನಾನು ಮೌನವಾಗಿರುತ್ತೇನೆ. ನನ್ನ ತೋಳುಗಳನ್ನು ಕತ್ತರಿ ಮಾಡಿ ದೂರ ಎಲ್ಲೋ ನೋಡುತ್ತ ತುಟಿಕಚ್ಚಿ ಸುಮ್ಮನಿರುತ್ತೇನೆ. ಇದೆಲ್ಲ ನಟನೆ. ಮನ್ನದಾಳದ ಗುಟ್ಟು ನನಗೇ ಗೊತ್ತು-ಸಮವಸ್ತ್ರದಲ್ಲಿ ಠಾಕುಠೀಕಾಗಿ ಓಡಾಡುವ ಇವರು, ನಕ್ಷತ್ರವುಳ್ಳ ಟೋಪಿಯನ್ನು ಧರಿಸುವ ಈ ಯುವಕರು ಎಲ್ಲರಿಗಿಂತ ಚೆಲುವರು, ಧೀರರು, ಬುದ್ಧಿವಂತರು, ಒಳ್ಳೆಯವರು ಎಂದುಕೊಳ್ಳುತ್ತೇನೆ.

ಇದನ್ನು ನಾನು ಯಾರಿಗೂ ಬಾಬ್ಬಿಟ್ಟು ಹೇಳಿಲ್ಲ. ಆದರೂ ಆ ಯುವಕರೆಲ್ಲ ನನ್ನೊಂದಿಗೆ ಗೌರವಪೂರ್ವಕವಾಗಿ, ಹೃದಯಪೂರ್ವಕವಾಗಿ ಮಾತಾಡುತ್ತಾರೆ.

"ಅದೇನು ವಿಶೇಷ ಅಲ್ಲ ಬಿಡು" ಅಂತ ನನ್ನ ಇಬ್ಬರೂ ಒಡನಾಡಿಗಳು ಹೇಳುತ್ತಾರೆ; "ನೀನು ಸೊಗಸಾಗಿ ಹಾಡ್ತೀಯ, ಒಳ್ಳೇ ರೂಪವತಿ. ಅಷ್ಟೇ ಯಾಕೆ, ನೀನು ಬಾಂಬ್ ನಾಶ ಮಾಡೋದ್ರಲ್ಲಿ ದೈತ್ಯಳು," ಎನ್ನುತ್ತಾರೆ. ಅವರು ಹೇಳುವುದೆಲ್ಲ ಪೂರ್ತಿ ನಿಜವಲ್ಲ, ಬಿಡಿ.

ಹೊರಗಡೆ ಗಾಢ ಮೌನ. ಹತ್ತು ತಾಸುಗಳಿಂದ ಒಂದೇ ಒಂದು ವಿಮಾನದ ಸದ್ದೂ ಕೇಳಿಲ್ಲ. ದಕ್ಷಿಣದಲ್ಲೆಲ್ಲೋ ದಾಳಿ ನಡೆದಿದೆ. ಆ ದಿಕ್ಕಿನಿಂದ ಗರ್ಜನೆ ಕೇಳುತ್ತದೆ ಆಗಾಗ. ಇದೇನು ಒಳ್ಳೆಯದರ ಸೂಚನೆ ಅಲ್ಲ, ಈ ಮೌನ. ಸೂರ್ಯನ ಬೆಳಕು ಕೋರೈಸುತ್ತದೆ. ಗಾಳಿಯ ತೇವ ಕಮ್ಮಿಯಾಗುತ್ತಿದೆ. ಆದರೆ ಗವಿಯಲ್ಲಿ ಕೊರೆಯುವ ಚಳಿ.

ನೊ ದಿಂಬಿನ ಚೀಲದ ಮೇಲೆ ಕಸೂತಿ ಹಾಕುತ್ತಾಳೆ. ಇಲ್ಲಿ ನಮ್ಮೆಲ್ಲರಿಗೂ ಒಂದೊಂದು ಹವ್ಯಾಸ. ಥಳ ಒಂದು ಪುಟ್ಟ ಪುಸ್ತಕದಲ್ಲಿ ತಾನು ಕೇಳಿದ ಗೀತೆಗಳನ್ನೆಲ್ಲ ಬರೆದಿಟ್ಟುಕೊಳ್ಳುತ್ತಾಳೆ. ಅವರಿಬ್ಬರೂ ಹರಟೆ ಹೊಡೆದಾಗ ನಾನು ಕಿವುಡಿಯಾಗಿ ಕೂರುತ್ತೇನೆ. ಆದರೆ ಈ ಮಾತುಗಳು ನನ್ನನ್ನು ತಟ್ಟಿ ಎಬ್ಬಿಸುತ್ತವೆ. "ಇದು ಮುಗಿಯೋದಾದರೂ ಯಾವಾಗ?" ಹಾಗಂದದ್ದು ನೊ.

"ಏನು?" ಥಳ ಪ್ರಶ್ನಿಸುತ್ತಾಳೆ, ತಲೆಯೆತ್ತದೆ. ಆದರೆ ಧ್ವನಿಯಲ್ಲಿ ಆಶ್ಚರ್ಯವಿದೆ.

ನೊ ಆಕಳಿಸುತ್ತಾಳೆ, ಉತ್ತರಿಸುವುದಿಲ್ಲ. ಅದರ ಅರ್ಥವೇನು ಎಂದು ನನಗೆ ಗೊತ್ತು. ಯುದ್ಧವೆಲ್ಲ ಮುಗಿದ ಮೇಲೆ ಜಲ-ವಿದ್ಯುಚ್ಛಕ್ತಿ ಕೇಂದ್ರವೊಂದರಲ್ಲಿ ನೋ ಕೆಲಸಕ್ಕಾಗಿ ಬರೆದುಕೊಳ್ಳುತ್ತಾಳೆ. ಅಲ್ಲಿ ಬೆಸುಗೆ ಹಾಕುವ ಕೆಲಸ. ಕಾರ್ಖಾನೆಯ ವಾಲಿಬಾಲ್ ತಂಡಕ್ಕೆ ಸದಸ್ಯೆಯಾಗುತ್ತಾಳೆ. ಯಾರಿಗೆ ಗೊತ್ತು, ರಾಷ್ಟ್ರೀಯ ಮಟ್ಟದ ಆಟಗಾತಿಯಾದರೂ ಆಗಬಹುದು.

ಥಳಗೆ ವೈದ್ಯಕೀಯದಲ್ಲಿ ಆಸಕ್ತಿ. ಅವಳ ಗಂಡ ಒಬ್ಬ ಕ್ಯಾಪ್ಟನ್ ಆಗಿರಬೇಕಂತೆ. ಸದಾ ಕೆಲಸಕ್ಕಾಗಿ ಮನೆಯಿಂದ ಹೊರಗಿದ್ದು ಆಗಾಗ ಮಾತ್ರ ಮನೆಗೆ ಬರುತ್ತಾನೆ. ಆ ಕಿವಿಯಿಂದ ಈ ಕಿವಿಯವರೆಗೆ ಸೊಗಸಾದ ಕಪ್ಪು ಗಡ್ಡ ಬೆಳೆಸಿರುತ್ತಾನೆ. ಸದಾ ಇವಳ ಕಾಲಡಿಯಲ್ಲಿರುವ ದಾಸ ಅವಳಿಗೆ ಬೇಡವಂತೆ. ಹಾಗಿದ್ದರೆ ಪ್ರೇಮದ ಸವಿಯೆಲ್ಲ ಬತ್ತಿಹೋಗುತ್ತದೆಯಂತೆ. ನನಗೂ ಭವಿಷ್ಯದ ಬಗ್ಗೆ ಮಾತಾಡಲು ಇಷ್ಟ. ದೊಡ್ಡ ಯೋಜನೆಗಳು. ಏನಾಗಬೇಕು ನಾನು? ವಾಸ್ತುಶಿಲ್ಪಿ? ಸೊಗಸಾದ ಕಲ್ಪನೆ. ಮಕ್ಕಳ ಚಲನಚಿತ್ರದಲ್ಲಿ ಹಿನ್ನೆಲೆ ಧ್ವನಿ ನೀಡುವ ಕೆಲಸವೋ? ಗಣಿ ಕೆಲಸದಲ್ಲಿ ಕ್ರೇನ್‌ನ ನಿರ್ವಾಹಕಿಯಾದರೆ? ಸಂತೋಷ ನಾವು ಪಡಕೊಂಡಲ್ಲಿದೆ. ನನ್ನ ಉತ್ಸಾಹ, ಪ್ರತಿಭೆಯನ್ನು ಎಲ್ಲಾದರೂ ಹೊರಸೂಸಬಲ್ಲೆ. ಇಲ್ಲಿ, ಬೆಟ್ಟದ ಮೇಲೆ ಮಾಡುತ್ತಿಲ್ಲವೆ? ಈ ಬೆಟ್ಟ ನಮ್ಮೆಲ್ಲರದೆಯ ಕನಸುಗಳ ತೂಗುದೊಟ್ಟಿಲು.

ಅದೆಲ್ಲ ಆ ಮೇಲೆ-ಯುದ್ಧ ಮುಗಿದಾಗ; ನಾವು ರಕ್ಷಿಸುತ್ತಿರುವ ಈ ರಸ್ತೆಗೆ ನಯವಾದ ಡಾಂಬರು ಬಂದಾಗ; ಹೈ ಟೆನ್ಷನ್ ತಂತಿಗಳು ಕಾಡಿನ ಮೂಲೆಗಳಲ್ಲಿ ಹಬ್ಬಿದಾಗ; ಮರದ ದಿಮ್ಮಿಗಳನ್ನುರುಳಿಸುವ ಕಾರ್ಯ ಹಗಲು ರಾತ್ರಿ ನಡೆದಾಗ.

ಪುಟ್ಟ ದಿಂಬಿನ ಮೇಲುಹೊದಿಕೆಯ ಮೇಲೆ ನೊ ಹೂಗಳನ್ನು ಬಿಡಿಸುತ್ತಾಳೆ. ದಟ್ಟವಾದ ಬಣ್ಣಗಳನ್ನು ತುಂಬಿಸುತ್ತಾಳೆ. ಕಸೂತಿಯ ಎಳೆಗಳು ತೀರಾ ದಪ್ಪ. ಹಾಗೆಂತ ನಾನು ಹೇಳಿದರೆ ಅವಳು ಒಪ್ಪುವುದಿಲ್ಲ. ನಮ್ಮಿಬ್ಬರ ಟೀಕೆ ಅತಿಯಾಯಿತೆಂದರೆ ಅವಳು ದಾರವನ್ನು ಹಲ್ಲಿನಿಂದ ಕಡಿದು ಕೈಗೆ ಸುತ್ತಿಕೊಳ್ಳುತ್ತ ಅನ್ನುತ್ತಾಳೆ.

"ನಿಮ್ಮಂಥ ಮಂದ ದೃಷ್ಟಿಯ ಜನರಿಗೆ ಎದ್ದು ಕಾಣಲೀಂತ ಹಾಗೆ ಮಾಡಿದೀನಿ ಅಷ್ಟೆ!"

ಏನೇ ಆಗಲಿ, ಆ ಹುಡುಗಿಯಲ್ಲಿ ನಾವೀನ್ಯವಿದೆ. ಮುಗ್ಧ ಮುಖ. ಸದಾ ಹಸನ್ಮುಖಿ. ಅಷ್ಟೇ ಮೊಂಡು, ಅಪರೂಪದ ವ್ಯಕ್ತಿ, ಅಲ್ಲವಾ? ಇಲ್ಲಿಗೆ ಬಂದಾಗಿನಿಂದ ಇವಳ ಜೊತೆ ಇದೀನಿ. ಬಂದ ಹೊಸತರಲ್ಲಿ ಇದೆಲ್ಲ ವಿಚಿತ್ರ ಅನ್ನಿಸ್ತಿತ್ತು. ಮಣ್ಣು ಹೊರಬೇಕಾದಾಗ ಆಶ್ಚರ್ಯದಿಂದ ಕೇಳಿದ್ದೆ.

"ಏನು? ಸ್ವಯಂಸೇವಕರು ಮಾಡೋ ಕೆಲ್ಸ ಇದೇ ಏನು? ಮಣ್ಣು ಹೊರೋದು?"

ಸ್ವಯಂಸೇವಕರು ಭುಜದ ಮೇಲೆ ಕೋವಿಯನ್ನು ಹೊತ್ತು ಶಿಸ್ತಾಗಿ ನಡೆದು ಹೋಗುತ್ತಾರೆ; ಕಾಡಿನಲ್ಲೆಲ್ಲ ಅವರ ಕಾಲಿನ ಲಯಬದ್ಧವಾದ ತುಳಿತದ ಸದ್ದು ಮೊಳಗುತ್ತವೆ; ಆಗಾಗ ಚುಟುಕಾಗಿ ಪರಸ್ಪರ ಸಂಭಾಷಣೆ ಮಾಡಿಕೊಳ್ಳುತ್ತ ಸಾಗುತ್ತಾರೆ-ಎಂದೆಲ್ಲ ಕಲ್ಪಿಸಿಕೊಂಡಿದ್ದ ನನಗೆ ಛಿಚ್ ಅನ್ನಿಸಿತು.

ಅವರೂ ಮಣ್ಣು ಹೊರುವುದಕ್ಕೆ ನಾನು ಹೋದೆ ಅನ್ನಿ; ಅನಂತರ ಅದೊಂದು ಅಭ್ಯಾಸವಾಯಿತು.

ಒಮ್ಮೊಮ್ಮೆ ಊಟದ ವೇಳೆಯಲ್ಲಿ ತುಂಬಾ ಕಷ್ಟವಾಗುತ್ತಿತ್ತು-ಬರೀ ಅನ್ನ, ಮೇಲೋಗರವೇನೂ ಇಲ್ಲದೆ ಅದನ್ನು ತಿನ್ನುವುದಾದರೂ ಹೇಗೆ? ಗಂಡಸರೆಲ್ಲ ನಮ್ಮನ್ನು ಕನಿಕರದಿಂದ ಕಾಣುತ್ತಿದ್ದರು. ಮೊದಲ ಸಲ ಬಾಂಬ್ ದಾಳಿಯಾದಾಗ ನಮ್ಮಲ್ಲಿ ಕೆಲವರು ಮೂರ್ಛೆಹೋಗಿದ್ದೆವು.

ಈಗ ಅದೆಲ್ಲ ರೂಢಿಯಾಗಿದೆ.

ನೊ ಇಲ್ಲಿಗೆ ಬಂದ ಬಳಿಕ ಬಂದವಳು ನಾನು. ಶಿಬಿರದ ಹಿಂದೆ ಮರದ ದಿಮ್ಮಿಯೊಂದಕ್ಕೆ ಒರಗಿ ಕೂತಿದ್ದೆ ಅವತ್ತು. ಮನಸ್ಸೆಲ್ಲ ಖಾಲಿಯಾಗಿತ್ತು. ಆಗ ನೊ ಬಂದಳು. ನದಿಯಲ್ಲಿ ಮಿಂದಿದ್ದಳೆಂದು ತೋರುತ್ತದೆ, ಕೂದಲಿನಿಂದ ನೀರು ತೊಟ್ಟಿಕ್ಕುತ್ತಿತ್ತು. ಹಣೆಯ ಮೇಲೆ ಹರಿದು ಮೂಗಿನ ತುದಿಯಿಂದ ಹನಿಹನಿ ಒಸರುತ್ತಿತ್ತು. ಓ ಇಲ್ಲಿ ನೀರಿಗೇನೂ ಬರವಿಲ್ಲ ಅಂತ ಕಾಣುತ್ತೆ; ಈಜಾಟಕ್ಕೂ ಅವಕಾಶ ಇರಬಹುದು. ನನ್ನನ್ನು ನೋಡಿ ನೊ ಹತ್ತಿರ ಬಂದಳು. ಒದ್ದೆಯಾದ ಟವೆಲನ್ನು ಹಿಂಡುತ್ತ ನನ್ನನ್ನು ಅಡಿಯಿಂದ ಮುಡಿಯವರೆಗೆ ನೋಡಿದಳು. ನನ್ನ ಕ್ಯಾನ್‌ವಾಸ್ ಷೂಗಳಿಗೆ ಅಂಟಿದ್ದ ಮಣ್ಣನ್ನು ನಾನು ದಿಮ್ಮಿಗೆ ಒರಸುತ್ತಿದ್ದೆ. ಅವಳು ಕೇಳಿದಳು.

"ಯಾವ ಯೂನಿಟ್‌ನಿಂದ ಬಂದಿದ್ದೀಯಾ? ನಿನ್ನ ಹೆಸರೇನು? ಯಾವ ಊರು?"

ಷೂ ಒರೆಸುವುದನ್ನು ನಿಲ್ಲಿಸಿದೆ. ಜಾಗೃತಳಾದೆ. ಶಾಲೆಯಲ್ಲಿ ಎನ್‌ಸಿಸಿ ಶಿಕ್ಷಣ ಪಡೆದಾಗ ಕುಸ್ತಿ ವಿದ್ಯೆಯನ್ನು ಕಲಿತಿದ್ದೆ. ಸೊಂಟದ ಮೇಲೆ ಕೈ ಊರಿ ಸ್ವರಕ್ಷಣಾ ಭಂಗಿಯಲ್ಲಿ ನಿಂತೆ. 'ನಾನು ಇವಳನ್ನು ಹೊಡೆದು ಉರುಳಿಸಬೇಕೆ? ಅವಳೂ ಹೋರಾಟಕ್ಕಿಳಿದರೆ? ಎಂಥ ಪೆಟ್ಟು ಕೊಡ್ತೀನಿ ಅಂತ್ರ...ಕೈ ಮೇಲೆ ಒಂದು ನಿರ್ದಿಷ್ಟ ಜಾಗವನ್ನು ಅದುಮಿ ಹಿಡೀಬೇಕು. ತುಂಬಾ ಕಮ್ಮಿ ಒತ್ತಡ ಸಾಕು.'

ಆದರೆ ಅವಳಾಗಲೇ ಹೊರಟು ಬಿಟ್ಟಿದ್ದಳು. ಜೇಬಿನಲ್ಲಿ ಕೈ ತೂರಿಸಿ ಒಳಗೆ ಹೋಗುತ್ತ ನನ್ನನ್ನೂ ಕಣ್ಸನ್ನೆಯಿಂದಲೇ ಕರೆದಳು. ಅವಳ ಹಿಂದೆ ಹೋಗದೆ ನನಗೆ ನಿರ್ವಾಹವಿಲ್ಲ.

ಆ ಬಳಿಕ ಒಬ್ಬರ ಮೇಲೆ ಒಬ್ಬರು ನಿಗಾ ಇಟ್ಟಿದ್ದೆವು. ನಿಧಾನವಾಗಿ ಪರಸ್ಪರ ಅರ್ಥಮಾಡಿಕೊಂಡೆವು. ಯಾವಾಗ ಗೆಳತಿಯರಾದೆವೋ ಗೊತ್ತಿಲ್ಲ. ನಮ್ಮಿಬ್ಬರಿಗೂ ಹದಿನಾರು ವರ್ಷ ವಯಸ್ಸು. ಆದರೂ ಹೊಸಬಳೊಂದಿಗೆ ಮುಖಾಮುಖಿಯಾದಾಗ ಹಳಬಳೊಬ್ಬಳು ಕೊಂಚ ಜಂಭದಿಂದ ವರ್ತಿಸಿದರೆ ಅದರಲ್ಲೇನೂ ವಿಶೇಷವಿಲ್ಲ. ನನಗೆ ಅವಳನ್ನು ಕಂಡು ಪ್ರೀತಿ ಮೊಳೆಯಿತು. ಕೌತುಕಕಾರಿ ವ್ಯಕ್ತಿತ್ವ. ಯುವಕರಿಗೆ ಗೊತ್ತು-ಅವಳಿಗೆ ತೀರಾ ಸನಿಹವಾಗುವುದು ಒಳ್ಳೆಯದಲ್ಲ ಎಂದು. ಆದರೂ ಯಾರಾದರೂ ಛೇಡಿಸಿದರೆ ಅವಳು ಬೇಡ ಎನ್ನುವುದಿಲ್ಲ.

ನನ್ನ ಹಾಗೆ ಅವಳಿಗೂ ಸ್ವಚ್ಛಂದ ಜೀವನ ಇಷ್ಟ. ನಾವು ಆಗಾಗ ಮಾತಾಡಿಕೊಳ್ಳುತ್ತೇವೆ: "ಪ್ರೇಮಿಸುವುದೇನೋ ಒಪ್ಪಿಗೆ. ಆದರೆ ಮದುವೆ? ಬೇಡಪ್ಪ! ಒಳ್ಳೆ ಫಜೀತಿ! ಮಕ್ಕಳ ಬಟ್ಟೆಗಳು, ಹಾಸಿಗೆ-ಹೊದಿಕೆ, ಸೊಳ್ಳೆಪರದೆ, ಅಡುಗೆ, ಮನೆ ಕೆಲಸ... ಇನ್ನೂ ಏನೇನು? ಆ ಮೇಲೆ ಸುತ್ತಾಡಿ ಬರೋದಕ್ಕೆ ವೇಳೆಯಿರೋಲ್ಲ. ಅದೇ ಒಬ್ಬ ಗೆಳೆಯನಾದರೋ? ನಮ್ಮನ್ನು ಸಿನಿಮಾಗೆ ಕರೆದೊಯ್ಯುತ್ತಾನೆ. ನಾವು ಕೋಪದಿಂದ ವರ್ತಿಸಿದಾಗ ರಮಿಸುತ್ತಾನೆ. ನಮಗೆ ಎಷ್ಟುಬೇಕೋ ಅಷ್ಟು ಓದಿಕೊಳ್ಳಬಹುದು."

ನೊಳಿಗೆ ಗೆಳೆಯ ಇದ್ದಾನೆ ಒಬ್ಬ. ಯಂತ್ರಶಿಲ್ಪಿ. ಪದೇಪದೇ ಪತ್ರ ಬರೆಯುತ್ತಿರುತ್ತಾನೆ. "ಏನೇ ಆದರೂ ಹನಾಯ್‌ನಲ್ಲಿ ಬಿಡುವಿನ ವೇಳೆಗೆ ಬರವಿಲ್ಲ..." ಎಂದು ಕಾರಣ ಕೊಡುತ್ತಾನೆ. ನೊ ಎರಡು ವರ್ಷದ ಪುಟ್ಟ ಮಗುವಾಗಿದ್ದಾಗ ತೆಗೆದ ಛಾಯಾಚಿತ್ರವೊಂದು ಅವನ ಬಳಿಯಿದೆ; ಪುಟಾಣಿ ಹುಡುಗಿಯೊಬ್ಬಳು ಪ್ಯಾಂಟ್ ಧರಿಸಿಕೊಂಡಿದ್ದಾಳೆ. ಕಪ್ಪು ಮೇಲುವಸ್ತ್ರ. ಬಟ್ಟೆಯ ಜೊಪ್ಪಿಗೆ-ಅವಕ್ಕೆ ಅಗಲವಾದ ಅಂಚು. ತೂಗು ಪಟ್ಟಿಗಳು. ಕೈಯಲ್ಲಿ ಯಾವುದೋ ಕಾಡು ಹೂಗಳ ಗೊಂಚಲು. ಹಿಂಬದಿಯಲ್ಲಿ ನೂರು ವರ್ಷ ವಯಸ್ಸಾದ ಮಂದಿರ. ಅವನ ಬರವಣಿಗೆಯ ತುಣುಕೊಂದನ್ನು ನಾನು ಪದೇಪದೇ ಓದಿದ್ದೇನೆ–"ನಾನು ಚೆನ್ನಾಗಿದ್ದೇನೆ. ನನಗೆ ಫುಟ್‌ಬಾಲ್ ಇಷ್ಟ. ನಾನು ದೃಢಕಾಯನಾಗುತ್ತಿದ್ದೇನೆ! ನೀನು ಎರಡು ವರ್ಷದ ಮಗುವಾದಾಗ ಹೇಗಿದ್ದೆ ಎಂಬುದು ನನಗೆ ಗೊತ್ತು. ಈಗ ಹೇಗಿರುವೆಯೋ ತಿಳಿಯದು. ಫೋಟೋ ನೋಡುತ್ತ ನನಗೆ ನಾನೇ ಅಂದುಕೊಳ್ತೀನಿ: 'ಇದು ನೀನೇ' ಕೈಯಲ್ಲಿ ಹೂ ಇಟ್ಕೊಂಡು ಪುಟ್ಟ ಮಗುವಾಗಿ. ನಿನ್ನನ್ನ ಕರ್ಕೊಂಡು ಹೋಗಿ ಚಾಕಲೇಟು ಕೊಡಿಸ್ತೀನಿ. ಎಲ್ಲಿಗೆ ಹೋಗ್ಬೇಕೂಂತ ಕೇಳ್ತೀನಿ. ನೀನು ಎಲ್ಲಿಗೆ ಅಂತ ಹೇಳು. ನಾನು ನಿನ್ನ ಮಾವ. ಅಲ್ಲಿಗೆ ಕರ್ಕೊಂಡು ಹೋಗ್ತೀನಿ..."

ತಮಾಷೆ ಅಲ್ವಾ? ಆದರೆ ನಗಬೇಕು ಅನಿಸುವುದಿಲ್ಲ ನಮಗೆ ಯಾರಿಗೂ. ಉತ್ತರ ದಿಕ್ಕಿನ ಕಡೆ ದಿಟ್ಟಿಸುತ್ತೇವೆ-ಹತಾಶ ಚಹರೆಯನ್ನು ಹೊತ್ತು. ಅಲ್ಲಿದೆ ಹನಾಯ್. ನಾನು ಎಷ್ಟೋ ದಿನಗಳ ಹಿಂದೆ ಬಿಟ್ಟು ಬಂದ ಹನಾಯ್ ಅಲ್ಲಿದೆ. ಅಲ್ಲಿಂದ ದೂರ ಈ ಗುಡ್ಡದಲ್ಲಿ ಬದುಕುವಾಗಲೂ ನಮಗೆ ಹನಾಯ್ ನೆನಪು ನಿತ್ಯ ಹಸಿರು.

ಒಂದು ಹಳೆ ಮನೆಯಿದೆ ಅಲ್ಲಿ. ಅದಕ್ಕೆ ಮಹಡಿ ಕೋಣೆಯಿದೆ. ಉದ್ದಕ್ಕೂ ಮರಗಳಿರುವ ಓಣಿಯೊಂದರ ತುದಿಯಲ್ಲಿದೆ ಆ ಮನೆ. ಅದರಲ್ಲೇ ನಾನು ವಾಸವಾಗಿದ್ದುದು. ರಾತ್ರಿ ಕಿಟಕಿಯ ಅಂಚಿನಲ್ಲಿ ಕುಳಿತು ಕಪ್ಪಾದ ಛಾವಣಿಯನ್ನೇ ದಿಟ್ಟಿಸುತ್ತ ನಾನು ಹಾಡುತ್ತಿದ್ದೆ. ಒಂದಾದ ಮೇಲೊಂದು ಹಾಡು. ಅದೂ ಗಟ್ಟಿಯಾಗಿ. ನನ್ನ ನೆರೆಯವನು ಒಬ್ಬ ವೈದ್ಯ. ರಾತ್ರಿ ನಿದ್ದೆ ಬರುತ್ತಿರಲಿಲ್ಲ ಆತನಿಗೆ. ದೀಪ ಹತ್ತಿಸಿ ನನ್ನನ್ನು ಎಚ್ಚರಿಸುತ್ತಿದ್ದ. ತಿಂಗಳಿಗೆ ಇಪ್ಪತ್ತು ಸಲ ಹೀಗಾಗುತ್ತಿತ್ತು. ನಾನು ಅವನು ನಿದ್ದೆ ಹೋಗುವ ತನಕ ಕಾದಿರುತ್ತಿದ್ದೆ. "ನಗರದ ರಾತ್ರಿಗಳ ಪ್ರಶಾಂತತೆ, ಅಗಾಧತೆಗಳು ನನಗೆ ಮಾತ್ರ ಗೊತ್ತು. ನನ್ನ ಕಣ್ಮುಂದೆ ತೇಲುವ ಸುಂದರ ಚಿತ್ರಗಳ ಕಲ್ಪನೆಯಾದರೂ ಇದ್ದೀತಾ ಅವನಿಗೆ? ಗೊರಕೆ ಹೊಡೆಯುತ್ತ ಕೆಟ್ಟ ಕನಸು ಕಾಣುವವನಿಗೆ?" ಎಂದುಕೊಳ್ಳುತ್ತಿದ್ದೆ. ಒಂದು ಸಲ ಹಾಡುವ ಉತ್ಸಾಹದ ಫಲವಾಗಿ ಎತ್ತರದ ಕಿಟಕಿಯಿಂದ ಕೆಳಗೆ ಬೀಳುವುದರಲ್ಲಿದ್ದೆ. ಸರಳುಗಳನ್ನು ಭದ್ರವಾಗಿ ಅವಚಿಕೊಂಡುಬಿಟ್ಟೆ. ನಡುಗುವ ಕೈಗಳು. ಕೆಳಗೆ ನೋಡಿದರೆ ತಲೆ ಸುತ್ತಿಬಂತು. ಎಷ್ಟು ಎತ್ತರದಲ್ಲಿದ್ದೆ ನಾನು! ಕೆಳಗೊಂದು ನಲ್ಲಿಯಲ್ಲಿ ನೀರು ಸದಾ ಸೋರುತ್ತಿತ್ತು. ಕೆಳಗಿಟ್ಟಿದ್ದ ಪಾತ್ರೆ ತುಂಬಿದಾಗ ನೀರಿನ ಟಪ್‌ಟಪ್ ಸದ್ದು. ಅದನ್ನು ಕೇಳಿದಾಗ ನೀರಿನ ಮಟ್ಟ ಮೇಲೇರಿ ನನ್ನ ಕಿಟಕಿಯವರೆಗೆ ಬರುತ್ತದೆಯೋ ಅನಿಸುತ್ತಿತ್ತು. ಹೀಗಿದ್ದರೂ ಹಾಡುಗಾರಿಕೆ ಮುಂದುವರಿಯಿತು. ಆದರೆ ಮೆಲುದನಿಯಲ್ಲಿ-ಯಾರಾದರೂ ಎಚ್ಚರಿಸಲು ಬರುತ್ತಾರೋ ಎಂದು ಕಿವಿ ನೆಟ್ಟಗೆ ಮಾಡಿಕೊಂಡು ಕಾದಿದ್ದೆ!

ನನ್ನ ಕೋಣೆಯ ಮೂಲೆಯಲ್ಲಿ-ನನ್ನ ತಾಯಿ ನನಗಾಗಿ ತಯಾರಿಸಿದ್ದ-ಒಂದು ಮೇಜು. ಆ ಪುಟ್ಟ ಮೇಜಿನ ಮೇಲೆಲ್ಲ ಪುಸ್ತಕಗಳು. ನಾನು ಬರೆಯಬೇಕಾದಾಗಲೆಲ್ಲ ಪುಸ್ತಕಗಳನ್ನು ಕಪಾಟಿನಿಂದ ತೆಗೆದು ಅದರ ಮೇಲೆ ಹರಡಿಕೊಳ್ಳುತ್ತಿದ್ದೆ. ಬರೆಯುವುದಕ್ಕೆ ಮುಂಚೆಯೇ ಆ ಚಿಲ್ಲಾಪಿಲ್ಲಿಯನ್ನು ನೋಡಿ ಮೈ ಪರಚಿಕೊಳ್ಳುವಂತೆ ಆಗುತ್ತಿತ್ತು. ಏನೂ ತೋಚದೆ ಕಣ್ಣಲ್ಲಿ ನೀರೂರುತ್ತಿತ್ತು. ಕೋಪದಿಂದ "ಅಮ್ಮಾ" ಎಂದು ಅರಚುತ್ತಿದ್ದೆ. ಆಕೆ ತನ್ನ ಹೊಲಿಗೆಯಂತ್ರವನ್ನು ಬಿಟ್ಟು ಓಡಿಬರುತ್ತಿದ್ದಳು. ಎಲ್ಲವನ್ನೂ ಒಪ್ಪವಾಗಿ ಜೋಡಿಸಿ ಕೊಟ್ಟು ಗೊಣಗುತ್ತಿದ್ದಳು: "ನೀನು ಮದುವೆ ಆಗಿ ಅದೇನು ಸಂಸಾರ ಮಾಡ್ತಿಯೋ ನಾ ಬೇರೆ ಕಾಣೆ. ನಿನ್ನ ಗಂಡ ಮೈಮುರಿದು ಹೊಡೆದಾಗಲೇ ನಿನಗೆ ಬುದ್ಧಿ ಬರೋದು!" ಅದಕ್ಕೇ, ನಾನು ನಿರ್ಧಾರಕ್ಕೆ ಬಂದದ್ದು-ನಾನು ಮದುವೆ ಮಾಡಿಕೊಳ್ಳೋದಿಲ್ಲ ಅಂತ.

"ಹಾಗಾದರೆ ಅಣಿಯಾಗೋಣವಾ?"

"ಏನು?"

ತಟಕ್ಕನೆ ಏಳುತ್ತೇನೆ. ಹಾಡುತ್ತ ಕನಸಿನಲ್ಲಿ ಮೈ ಮರೆತಿದ್ದೇನೆ.

ದಿಂಬಿನ ಚೀಲವನ್ನು ಸುತ್ತಿ ಸಿದ್ಧಳಾಗುತ್ತಾಳೇನೊ. ಥಅ ಗುಹೆಯ ಹೊರಗೆ ದಿಟ್ಟಿಸುತ್ತಾಳೆ. ಮೌನದ ಬೆಲೆ ನಮಗೀಗ ಗೊತ್ತಾಗಿದೆ: ಅದೋ ಸ್ಥಳಶೋಧಕ ವಿಮಾನ.

ಬೆಳಗಿನಿಂದ ಅಸಹನೀಯ ಮೌನ. ಈಗ ಶೋಧಕ-ವಿಮಾನದ ಸದ್ದು. ಹಿಂಬಾಲಿಸಿ ಬಂದ ಜೆಟ್ ವಿಮಾನಗಳ ಸುಂಯ್‌ಕಾರ. ಎರಡೂ ಸೇರಿ ಕಿವಿ ಕಿವುಡಾಗುವಂತೆ ಮಾಡುತ್ತವೆ. ಮೈಯಲ್ಲಿ ನಡುಕ.

"ಬರ್ತಿದೆ."

ನೊ ತನ್ನ ಶಿರಸ್ತ್ರಾಣವನ್ನು ಧರಿಸಿಕೊಂಡಳು. ತನ್ನ ಜೇಬಿನಿಂದ ಬಿಸ್ಕತ್ತನ್ನು ತೆಗೆದು ನಿಧಾನವಾಗಿ ಕುರುಕುತ್ತಾಳೆ ಥಅ. ಕೆಟ್ಟದ್ದೇನಾದರೂ ಜರಗಲಿದೆ ಎಂಬ ಸೂಚನೆ ಸಿಕ್ಕಾಗ ಇವಳ ತಾಳ್ಮೆ ಕಂಡು, ಹೊಡೆಯೋಣ ಅನ್ನಿಸುತ್ತೆ. ಅನೇ. ಥಅಗೆ ರಕ್ತವೋ ಚೇಳೋ ಜಿಗಣೆಯೋ ಕಾಣಲಿ! ಮೂರ್ಛೆ ಹೋದಾಳು. ಆಕೆ ಕಸೂತಿ ಹಾಕಿದ ಒಳಲಂಗ ತೊಡುತ್ತಾಳೆ. ಹುಬ್ಬುಗಳನ್ನು ಕಿತ್ತು ತೆಳುವಾದ ರೇಖೆಯಂತೆ ಮಾಡುತ್ತಾಳೆ. ಆದರೆ, ಕೆಲಸ ಮಾಡುವಾಗಿನ ಅವಳ ಧೈರ್ಯ, ದಿಟ್ಟತನ ನಮ್ಮನ್ನು ಮೂಕಗೊಳಿಸುತ್ತವೆ.

ಇದೊಂದು ನಿತ್ಯದ ಚರ್ಚೆ. ವಿಮಾನಗಳ ಮೊರೆತ. ಇಲ್ಲಿಂದ ಮುನ್ನೂರು ಮೀಟರುಗಳ ಅಂತರದಲ್ಲಿ ಬಾಂಬ್ ಸಿಡಿತ. ಒಣ ಹಾಕಿರುವ ನಮ್ಮ ಬಟ್ಟೆಗಳೂ ಅದುರುತ್ತವೆ. ಎಲ್ಲರೂ ಗಡಗಡ ನಡುಗುವುದು ನೋಡಿದರೆ ಉಗ್ರ ಚಳಿಜ್ವರ ಕಾಣಿಸಿಕೊಂಡಿದೆಯೋ ಅನ್ನಿಸುತ್ತೆ. ಗುಹೆಯ ಬಾಗಿಲಿನಲ್ಲಿ ಹೊಗೆ ಸುತ್ತಿಕೊಳ್ಳುತ್ತದೆ. ನೀಲಾಕಾಶ, ಮೋಡಗಳು ಮರೆಯಾಗುತ್ತವೆ.

ನನ್ನ ಕೈಯಿಂದ ಅಳತೆಯ ಕೋಲನ್ನು ಪಡೆದುಕೊಳ್ಳುತ್ತ ಬಿಸ್ಕತ್ತನ್ನು ನುಂಗಿ ಕೈ ಝಾಡಿಸಿ ಹಸನ್ಮುಖಿಯಾಗಿ ಹೇಳುತ್ತಾಳೆ ಥಅ:

"ನೀನು ಇಲ್ಲೇ ಇರು ಡಿಂಗ್. ಈ ಸಲ ಜಾಸ್ತಿ ಏನೂ ಬಿದ್ದಿಲ್ಲ. ಇಬ್ಬರು ಸಾಕು".

ನೊಳ ಭುಜದ ಮೇಲೆ ಕೈ ಹಾಕಿ ತನ್ನ ಹೆಗಲಿಗೆ ಗೋರುಸಲಿಕೆಯನ್ನೇರಿಸಿಕೊಂಡು ಹೊರಟುಬಿಡುತ್ತಾಳೆ.

ನನ್ನ ಆಕ್ಷೇಪಣೆಗೆ ರಹದಾರಿಯಿಲ್ಲ. ನಮಗೆ ಆಜ್ಞೆ ವಿಧಿಸುವವಳು ಅವಳೇ. ಇತ್ತ ಕಾಲ ಉರುಳಿದಂತೆ ನನ್ನ ನರಗಳು ಬಿಗಿಯಾಗುತ್ತವೆ. ಭೂತಕಾಲ, ಭವಿಷ್ಯತ್‌ಕಾಲ,... ಇದಾವುದೂ ಈಗ ಗಣನೆಗೆ ಇಲ್ಲ... ನನ್ನ ಒಡನಾಡಿಗಳು ಬಾರದೇ ಹೋದರೆ?

ಟೆಲಿಫೋನ್ ಕಮಾಂಡರ್ ಸ್ಥಿತಿಗತಿ ವಿಚಾರಿಸುತ್ತಿದ್ದಾನೆ.

ಅಸಹನೆಯಿಂದ "ಯಾರೂ ವಾಪಸು ಬಂದಿಲ್ಲ" ಎನ್ನುತ್ತೇನೆ.

ಈ ಅಸಹನೆ ಯಾಕೇಂತ?... ಓ ಮತ್ತೊಮ್ಮೆ ಬಾಂಬ್ ದಾಳಿ. ಹೊಗೆ ಗುಹೆಯೊಳಕ್ಕೆ ಲಗ್ಗೆಯಿಡುತ್ತದೆ. ಕೆಮ್ಮುತ್ತೇನೆ ನೆತ್ತಿಗೇರುತ್ತದೆ ಮದ್ದಿನ ಘಾಟು. ಈ ಕ್ಷಣ ಇಡೀ ಗುಡ್ಡದ ಮೇಲೆ ಬೇರಾವ ಮನುಷ್ಯ ಪ್ರಾಣಿಗಳೂ ಇಲ್ಲ. ನನ್ನ ಸಂಗಾತಿಗಳು ಮತ್ತು ಬಾಂಬ್‌ಗಳು ಮತ್ತು ಇಲ್ಲಿ ಕೂತಿರುವ ನಾನು. ಮತ್ತೆಲ್ಲ ನಿರ್ಜೀವ...ಅಷ್ಟರಲ್ಲಿ ಗುಡ್ಡದ ಮತ್ತೊಂದು ಬದಿಗಿರುವ ವಿಮಾನನಾಶಕ ಪಡೆಯಿಂದ ಉತ್ತರ ಬರುತ್ತದೆ. ಇಂಥ ಉತ್ತರ ಬಾರದಿದ್ದರೆ ಏನೋ ಕಳವಳ, ಭಯ. ಒಂದೇ ಒಂದು ಗುಂಡಿನ ಸಪ್ಪಳವಿರಲಿ; ಸಾಕು; ನಮ್ಮ ವಿಶ್ವಾಸ ಸೂರ್ಮಡಿಯಾಗುತ್ತದೆ. ಕಾತರದಿಂದ ಗುಹೆಯ ಹೊರಕ್ಕೆ ಬಂದು ನೋಡುತ್ತೇನೆ. ಹೊಗೆ, ಹೊಗೆ, ಹೊಗೆ. ಚಿಂತೆ ಕಾಡುತ್ತದೆ. ಇದ್ದಕ್ಕಿದ್ದಂತೆ ಗುಡ್ಡದಾಚೆಯಿಂದ 12.7 ಮಿ. ಮೀ. ಮೆಷೀನ್‌ಗನ್ನಿನ ಗುಡುಗು ಕೇಳುತ್ತದೆ. ಒಳ್ಳೆಯ ಸೂಚನೆ. ಸ್ಯಾಪರ್ ಕಂಪೆನಿಯಿಂದಿರಬೇಕು. ನಮ್ಮ ಮತ್ತು ವಿಮಾನನಾಶಕ ಪಡೆಯ ರಕ್ಷಣೆಗಾಗಿ ಧಾವಿಸುತ್ತಿದೆ. ನಾನು ಸಂತೋಷದಿಂದ ಕೂಗುತ್ತೇನೆ. ನಾವು ಏಕಾಕಿಗಳಲ್ಲ. ಎಷ್ಟೊಂದು ಜನ ಇದ್ದಾರೆ ಈ ಗುಡ್ಡದ ಸುತ್ತಮುತ್ತ! ಈ ವಿಮಾನನಾಶಕ ಪಡೆಯವರು, ಸ್ಯಾಪರ್ ಕಂಪೆನಿ, ಎಲ್ಲರೂ ನಮ್ಮ ಪರೇ. ನಾವು ಗಾಳಿಯಲ್ಲಿ ಒಮ್ಮೆ ಗುಂಡು ಹಾರಿಸಿದರೆ ಸಾಕು, ಅವರು ಧಾವಿಸಿ ಬರುತ್ತಾರೆ.

ಅರ್ಧ ತಾಸಿನಲ್ಲಿ ಥಅ ಮರಳಿ ಬರುತ್ತಾಳೆ. ನನ್ನ ಕಡೆ ನೋಡದೆಯೇ ಸುಸ್ತಾದ–ಆದರೆ ಕೋಪ ತುಂಬಿದ ಧ್ವನಿಯಲ್ಲಿ-ಹೇಳುತ್ತಾಳೆ:

"ಒಂದು ಸಾವಿರ ಕ್ಯೂಬಿಕ್ ಮೀಟರುಗಳು!"

ನೆಲದ ಮೇಲೆ ಕೂತು ಕಿತ್ತಲಿಯಿಂದ ನೀರು ಬಗ್ಗಿಸಿಕೊಂಡು ಕುಡಿಯುತ್ತಾಳೆ. ಬಾಯಿಂದ ನೀರು ಸೋರಿ ಬಟ್ಟೆಯ ಮೇಲೆ ಬೀಳುತ್ತದೆ.

ಟೆಲಿಫೋನ್ ಮಾಡಿ ವರದಿ ಒಪ್ಪಿಸುತ್ತೇನೆ.

"ಹೌದಾ? ಸರಿ, ಸಂಗಾತಿಗಳೇ" ಎನ್ನುತ್ತದೆ ಧ್ವನಿ.

ಕಮಾಂಡರ್ ವಿನಯಶೀಲ ಸಂಭಾಷಣೆಯಲ್ಲಿ "ಉಪಕಾರವಾಯ್ತು" "ಹೌದಾ?" "ಒಳ್ಳೇಯದಾಗಲಿ" ಇತ್ಯಾದಿ ಪ್ರಯೋಗಗಳನ್ನು ಬಳಸುತ್ತಾನೆ.

ಸಂಧಿವಾತದ ಲಕ್ಷಣಗಳುಳ್ಳ ತೆಳ್ಳನೆಯ ಆಸಾಮಿ. ಯುವಕ. ಕವನಗಳನ್ನು ಬರೆದು ಭಿತ್ತಿ-ಪತ್ರಿಕೆಗಳಲ್ಲಿ ಅಚ್ಚು ಹಾಕಿಸುತ್ತಾನೆ. ಅವನೂ ಹನಾಯ್‌ನಿಂದಲೇ ಬಂದವನಂತೆ.

ನೊ ನದಿಯಿಂದ ಸ್ನಾನಮಾಡಿ ಬರುತ್ತಾಳೆ. ಈ ಭಾಗದ ನದಿಗೆ ಆಗಾಗ ನಿಧಾನವಾಗಿ ಸಿಡಿಯುವ ಬಾಂಬ್‌ಗಳು ಬಂದು ಬೀಳುತ್ತವೆ. ನೊ ಒದ್ದೆ ಬಟ್ಟೆಯಲ್ಲೇ ಕೆಳಗೆ ಕೂತು ಕ್ಯಾಂಡಿ ಬೇಕೆಂದು ಕೇಳುತ್ತಾಳೆ. ನನ್ನ ಜೇಬಿನಲ್ಲಿ ತಡಕಾಡಿದಾಗ ಅಕಸ್ಮಾತ್ ನಿಂಬೆರುಚಿಯ ಪೆಪ್ಪರ್‌ಮಿಂಟುಗಳೆರಡು - ಅಂಟಂಟಾದವು-ಸಿಕ್ಕುತ್ತವೆ.

"ನಿಧಾನವಾಗಿಸಿಡಿಯುವ ನಾಲಕು ಬಾಂಬುಗಳು. ಹೆಚ್ಚೇನಿಲ್ಲ." ಅವಳೆಂದಳು.

ಹಿಂದಕ್ಕೆ ಒರಗಿ ತಲೆಯ ಹಿಂಭಾಗಕ್ಕೆ ಕೈ ಆನಿಸಿಕೊಂಡು ಕೂಡುತ್ತಾಳೆ. ಅವಳ ಗುಂಡಗಿನ ಕತ್ತು, ಮೇಲಂಗಿಯ ಪುಟ್ಟಪುಟ್ಟ ಗುಂಡಿಗಳು; ನನಗನ್ನಿಸುತ್ತೆ ಅವಳನ್ನು ಅಪ್ಪಿಕೊಳ್ಳಲೇ ಎಂದು. ಐಸ್‌ಕ್ರೀಮ್ ಕೆನೆಯಂತೆ ಶುಭ್ರವಾಗಿ ಹೊಳೆಯುತ್ತಾಳೆ.

ನೆರವು ಬೇಕೇ ಎಂದು ಕಂಪೆನಿಯ ಕಮಾಂಡರ್ ದೂರವಾಣಿಯಲ್ಲಿ ಕೇಳುತ್ತಾನೆ. ಇಲ್ಲ, ಬೇಡ. ನಾವು ನಿಭಾಯಿಸಿಕೊಳ್ಳಬಲ್ಲೆವು. "ನಮ್ಮ ಅದೃಷ್ಟ ಒಳ್ಳೆಯದು, ಸಂಗಾತಿಗಳೇ ಧನ್ಯವಾದಗಳು." (ಶುರುವಾಯಿತು ಇವನ ವಿನಯ ಸಂಭಾಷಣೆ.) "ಬೆಳಗ್ಗಿನಿಂದ ಒಂದು ನಿಮಿಷ ಪುರುಸೊತ್ತಿಲ್ಲ. ರಾಕೆಟ್ ಪಡೆಗಾಗಿ ರಸ್ತೆ ಸಿದ್ಧ ಮಾಡ್ತಿದೀವಿ. ನನಗೂ ವಿಶ್ರಾಂತಿ ಇಲ್ಲ. ಇರಲಿ. ನಿಮ್ಮ ಕೈಲಾದಷ್ಟು ಮಾಡಿ ಗೆಳತಿಯರೇ. ಶುಭಾಶಯ."

(ಮುಂದುವರಿಯುವುದು)

ಭೂನ್ಯಾಯ ಮಂಡಳಿಗಳ ತೀರ್ಮಾನಗಳ ಪರಿಶೀಲನೆಗೆ ಉಪಸಮಿತಿ

ಕರ್ನಾಟಕ ಸರಕಾರದ ಭೂಸುಧಾರಣಾ ಕಾಯಿದೆಯನ್ನು ಜಾರಿಗೊಳಿಸಲು ರಚಿತವಾದ ಭೂನ್ಯಾಯ ಮಂಡಳಿಗಳು ಇತ್ಯರ್ಥ ಮಾಡಿರುವ ಪ್ರಕರಣಗಳನ್ನು ಕುರಿತು ಪರಿಶೀಲಿಸಲು ಕಾಂಗ್ರೆಸ್ (ಐ) ಪ್ರಾಂತ ಅಧ್ಯಕ್ಷರಾದ ಶ್ರೀ ರಾಠೋಡ್‌ರವರು ರಾಜ್ಯ ಮಟ್ಟದ ಉಪಸಮಿತಿಯೊಂದನ್ನು ಸಂಸತ್ ಸದಸ್ಯ ಶ್ರೀ ಮಲ್ಲಣ್ಣನವರ ನೇತೃತ್ವದಲ್ಲಿ ನೇಮಿಸಿರುತ್ತಾರೆಂದು ಪ್ರಕಟವಾಗಿದೆ.

ಈ ಸಮಿತಿಯು ಎಲ್ಲಾ ಜಿಲ್ಲೆಗಳಲ್ಲೂ ಪ್ರವಾಸ ಕೈಗೊಂಡು ನ್ಯಾಯ ಮಂಡಳಿಗಳನ್ನು, ಖಾಸಗಿ ಸದಸ್ಯರನ್ನು ಜಿಲ್ಲಾ ಕಾಂಗ್ರೆಸ್ ಸದಸ್ಯರನ್ನು, ಪಕ್ಷದ ಕಾರ್ಯಕರ್ತರನ್ನು ಭೇಟಿ ಮಾಡಿ, ನ್ಯಾಯಮಂಡಳಿಯ ತೀರ್ಪಿನಿಂದ ಅನ್ಯಾಯವಾಗಿರುವ ಜನರ ಕುಂದು ಕೊರತೆಗಳನ್ನು ವಿಚಾರಿಸುವುದು, ಅಲ್ಲದೆ ವಿಶೇಷ ಜಿಲ್ಲಾಧಿಕಾರಿಗಳನ್ನು ಭೇಟಿಮಾಡಿ ಇತ್ಯರ್ಥವಾಗಿರುವ ಪ್ರಕರಣಗಳ ಬಗ್ಗೆ ಕುಂದುಕೊರತೆಗಳಿದ್ದರೆ ಅವುಗಳಿಗೆ ಪರಿಹಾರವನ್ನು ಸೂಚಿಸುವುದು ಈ ತನಿಖೆಯ ಉದ್ದೇಶವೆಂದು ತಿಳಿಸಿದ್ದಾರೆ.

ಭೂನ್ಯಾಯಮಂಡಳಿಯ ಸದಸ್ಯರು ಕಾಂಗ್ರೆಸ್ (ಐ) ಪಕ್ಷದವರೇ ಆಗಿದ್ದು, ಅದೇ ಪಕ್ಷದವರಿಂದ ತೀರ್ಮಾನಗಳ ಬಗ್ಗೆ ತನಿಖೆ ನಡೆಸಲು ಬರುವವರಿಂದ ನಡೆಯುವ ತನಿಖೆಯಾದರೂ ಹೇಗಿದ್ದೀತು? ಈ ತನಿಖೆ ನಡೆಸುವುದು ಎಲ್ಲಿ? ಯಾರನ್ನು ವಿಚಾರಿಸುವುದು? ಇದೇ ಪಕ್ಷದ ಸಮಿತಿಗಳಿಂದ, ನ್ಯಾಯ ಮಂಡಳಿಗಳಿಂದ ಮತ್ತು ವಿಶೇಷ ಅಧಿಕಾರಿಗಳಿಂದ ಈ ತನಿಖೆಯಿಂದ ಅನ್ಯಾಯವಾದ ಎಷ್ಟು ತೀರ್ಮಾನಗಳು ಹೊರಬರುವುದೆಂದು ಈಗಾಗಲೇ ಲೆಕ್ಕ ಹಾಕಬಹುದು!

ಶ್ರೀ ರಾಠೋಡ್‌ರವರು ಭೂಸುಧಾರಣಾ ಕಾಯಿದೆಯನ್ನು ಇನ್ನೊಮ್ಮೆ ಓದಬೇಕು. "ಕಾಯಿದೆಯ 9ನೇ ವಿಧಿಯಲ್ಲಿ ಒಕ್ಕಲಿಗೆ ಅನುಭೋಗದ ಹಕ್ಕು ನೀಡುವಿಕೆಯಲ್ಲಿ ಟ್ರಿಬ್ಯೂನಲ್‌ನ ತೀರ್ಮಾನವೇ ಅಂತಿಮವಾದುದು. ಅದರ ವಿರುದ್ಧ ಅಪೀಲು ಮಾಡಲು ಸಾಧ್ಯವಿಲ್ಲ, ಹೈಕೋರ್ಟಿಗೆ ರಿಟ್ ಮಾಡಬಹುದು" ಎಂದು ಸ್ಪಷ್ಟಗೊಳಿಸಲಾಗಿದೆ. ಹೀಗಿರುವಾಗ ಈ ಉಪಸಮಿತಿಯ ವರದಿಯು ನಿಷ್ಪಕ್ಷವಾಗಿ ಬಂದರೂ (ತಪ್ಪು ಪಕ್ಷದವರಿಂದಲೇ ನೀಡಿದ ತೀರ್ಮಾನದ ಬಗ್ಗೆ ನಿಷ್ಪಕ್ಷವಾದ ವರದಿ ಬರುವುದಾದರೂ ಹೇಗೆ?) ಕಾನೂನಿನಲ್ಲಿ ತಿದ್ದುಪಡಿ ಮಾಡದಿದ್ದರೆ ಈ ವರದಿಯಿಂದ ಪ್ರಯೋಜನವಾಗದು. (ಹೈಕೋರ್ಟಿಗೆ ಹೋಗಲು ಸಾಧ್ಯವಿರುವುದು ಭೂಮಾಲಕರಿಗೆ).

ಈ ಸಮಿತಿಯ ತನಿಖೆಯಿಂದ ಭೂಮಿ ಕಳೆದುಕೊಂಡವರಿಗೆ ಮಂಚನೆಯ ನಂಬಿಕೆ ಹುಟ್ಟಿಸಲು ರಾಠೋಡ್‌ರವರು ಹೂಡಿದ ಇನ್ನೊಂದು ತಂತ್ರವಲ್ಲವೆ?

ನಿಜವಾಗಿ ನಿಷ್ಪಕ್ಷವಾಗಿ ತನಿಖೆ ನಡೆಸುವುದಾದರೆ ಪ್ರತಿ ಜಿಲ್ಲೆಯಲ್ಲೂ ತಾಲ್ಲೂಕುಗಳಲ್ಲೂ ಸರ್ವಪಕ್ಷಗಳ ಸಮಿತಿಗಳನ್ನು ರಚಿಸಿ, (ಭತ್ತೆ ರಹಿತ) ಭೂಮಿ ಕಳೆದುಕೊಂಡವರನ್ನು ಆಹ್ವಾನಿಸಿ, ನ್ಯಾಯ ಅನ್ಯಾಯಗಳ ವಿಮರ್ಶೆ ನಡೆಸಿ ವರದಿಯಾಗಲಿ. ಆಗ ಭೂನ್ಯಾಯಮಂಡಳಿಗಳಲ್ಲಿ ನಡೆದ ಲಂಚರುಷುವತ್ತು ಬೆಳಕಿಗೆ ಬರುವುದು ಖಂಡಿತಾ. ತನ್ನ ಜೀವಮಾನವನ್ನೇ ತನ್ನ ಭೂಮಿಗಾಗಿ ಮುಡಿಪಾಗಿಟ್ಟ ಒಕ್ಕಲಿಗರನ್ನು ಅನ್ಯಾಯಪಡಿಸಿದ ಭೂನ್ಯಾಯಮಂಡಳಿಗಳ ಸದಸ್ಯರಿಗೆ ಶಿಕ್ಷೆಯಾಗಲೇಬೇಕು.

ಇದನ್ನು ಶ್ರೀ ರಾಠೋಡ್‌ರವರು ಮಾಡಬೇಕಾದ ಕೆಲಸ. ಒಕ್ಕಲಿಗರು ಭೂನ್ಯಾಯಮಂಡಳಿಗಳ ಬಗ್ಗೆ ವಿಶ್ವಾಸ ಕಳೆದುಕೊಂಡಾಗ ಇಂತಹ ತನಿಖೆಯಿಂದ ಏನು ಸಾಧನೆಯಾದೀತೆಂದು ನೋಡಬೇಕಾದ ಫಲಿತಾಂಶ.

–ಯು. ಪಿ. ಡಿ'ಸೋಜ

ಸ್ವೈಫಂಡರಿ ಪದವೀಧರರ ಮುಷ್ಕರ ಪ್ರದರ್ಶನ

ನವೆಂಬರ್ 1ರಂದು ಸರಕಾರವು ಸ್ಟೈಫಂಡರಿ ಪದವೀಧರರನ್ನು ಖಾಯಂ ಮಾಡುವ ಭರವಸೆ ನೀಡಿತ್ತು. ಆ ಭರವಸೆ ಹುಸಿಯಾಗಿದೆ. ಸಚಿವರ ಉಪಸಮಿತಿಯ ನೆಪದಲ್ಲಿ ಖಾಯಂಗೊಳಿಸುವುದನ್ನು ವಿಳಂಬಮಾಡಲಾಗುತ್ತಿದೆ. ಸಧ್ಯ ಅಸ್ತಿತ್ವದಲ್ಲಿರುವ ಸ್ಟೈಫಂಡರಿ ಪದವೀಧರರ ರಾಜ್ಯಸಂಘಟನೆ ಸರಕಾರದ ವಿಳಂಬ ನೀತಿಯನ್ನು ಪ್ರಶ್ನಿಸಲು ಹಿಂದೇಟುಹಾಕುತ್ತಿದೆ.

5-11-81ರಂದು ಧಾರವಾಡ ಜಿಲ್ಲಾ ಸ್ಟೈಫಂಡರಿ ಪದವೀಧರರು ಧಾರವಾಡದಲ್ಲಿ ಸಭೆ ಸೇರಿ ಜಿಲ್ಲಾ ಮಟ್ಟದ ಕ್ರಿಯಾಸಮಿತಿ ರಚಿಸಿದ್ದಾರೆ. ರಾಜ್ಯಮಟ್ಟದಲ್ಲಿಯೂ ಈ ಕ್ರಿಯಾ ಸಮಿತಿಯನ್ನು ವಿಸ್ತರಿಸುವ ಯೋಜನೆ ಹಾಕಿಕೊಳ್ಳಲಿದೆ.

ಕ್ರಿಯಾಸಮಿತಿಯು ಸರಕಾರದ ವಿಳಂಬ ನೀತಿಯನ್ನು ಪ್ರತಿಭಟಿಸಿ, ಸ್ಟೈಫಂಡರಿ ಪದವೀಧರರನ್ನು ಖಾಯಂಗೊಳಿಸುವ ನಿರ್ಧಾರವನ್ನು ಪ್ರಕಟಿಸಬೇಕೆಂದು ಒತ್ತಾಯಿಸಿ 9-11-81ರಂದು ಧಾರವಾಡ ಜಿಲ್ಲಾಧಿಕಾರಿ ಕಚೇರಿ ಎದುರು ಮುಷ್ಕರ ಪ್ರದರ್ಶನ ಹಾಗೂ ಧರಣಿ ಸತ್ಯಾಗ್ರಹ ನಡೆಸಲಾಯಿತು. ಜಿಲ್ಲಾಧಿಕಾರಿಗೆ ಮನವಿ ಅರ್ಪಿಸಲಾಯಿತು.

ನಂತರ ನಡೆದ ಸಭೆಯನ್ನುದ್ದೇಶಿಸಿ ವಿ. ಜಿ. ಕಮ್ಮಾರ, ಜಿ. ವಾಯ್‌ಮಠ ಜಿ. ಎನ್. ದೇಶಪಾಂಡೆ, ಸಿ. ಎಗಡ್ಡಿ ಮತ್ತು ಕೋಳಿವಾದ ಮೊದಲಾದವರು ಮಾತನಾಡಿದರು.

ಡಿ.ವೈ.ಎಫ್.ಐ. ಸ್ಥಾಪನಾ ದಿನಾಚರಣೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ನಿನ ಕೇಂದ್ರ ಸಮಿತಿಯ ಕರೆಯಂತೆ 4-11-81ರಂದು ಮಂಗಳೂರಿನಲ್ಲಿ ಸಭೆಗಳನ್ನು ನಡೆಸಲಾಯಿತು.

ಬೋಳಾರು, ತೊಕ್ಕೋಟು, ಕೊಟ್ಟಾರ ಮತ್ತು ಕುತ್ತಾರು ಪದವಿನಲ್ಲಿ ಸಭೆಗಳು ನಡೆದವು. ಈ ಸಭೆಗಳನ್ನು ಉದ್ದೇಶಿಸಿ ಕಾಂ. ಜಯಂತ, ಅನಂತ ಉಳ್ಳಾಲ, ಯು. ಬಿ. ನಾರಾಯಣ, ವಿಶ್ವನಾಥ, ರಮೇಶ್ ಉಳ್ಳಾಲ, ಭಾಸ್ಕರ ಸುವರ್ಣ ಮೊದಲಾದವರು ಮಾತನಾಡಿ ಯುವಜನ ಸಂಘಟನೆಯ ಅಗತ್ಯತೆಯ ಕುರಿತು ವಿವರಿಸಿದರು.

○

ಬಂಡವಾಳಶಾಹಿ ಪಥದ ಹುಚ್ಚರಾಷ್ಟ್ರಗಳು

(4ನೇ ಪುಟದಿಂದ)

ಪ್ರವಾಸೋದ್ಯಮ ಸಪ್ತಾಹ

ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮ ಸಪ್ತಾಹವನ್ನು ಅದ್ದೂರಿಯಿಂದ ಆಚರಿಸಲಾಯಿತು. ಖಾದಿ ಗ್ರಾಮೋದ್ಯೋಗ ಸಪ್ತಾಹ, ದಾರುಬಂದಿ ಸಪ್ತಾಹ, ಗಾಂಧಿ ಸಪ್ತಾಹ- ಇಂಥ ಹಲವಾರು ಸಪ್ತಾಹಗಳ ಪ್ರವಾಹದಲ್ಲಿ ಪ್ರವಾಸೋದ್ಯಮ ಸಪ್ತಾಹವೂ ಒಂದು. ಎಲ್ಲ ಸಪ್ತಾಹಗಳೂ ವಿಜೃಂಭಣೆಯಿಂದಲೇ ನೆರವೇರುತ್ತವೆ. ಆದರೆ ಅಂಥ ಸಪ್ತಾಹಗಳ ಹಿಂದಿನ ಮತ್ತು ಮುಂದಿನ ದಿನಗಳು ಮಾತ್ರ ಚಿಂತಾಜನಕ. ಸರಕಾರದ ಖಜಾನೆಯಿಂದ ಲಕ್ಷಾವಧಿ ರೂಪಾಯಿ ಖರ್ಚಾಗುತ್ತದೆ, ನಾಟಕ, ನೃತ್ಯ, ಕವ್ವಾಲಿಗಳ ರಸದೂಟವಾಗುತ್ತದೆ. ಅಧಿಕಾರಿಗಳ, ಅವರ ಕಾರು-ಜೀಪಿನ ದಣಿವಿಲ್ಲದ ಓಡಾಟವಾಗುತ್ತದೆ. ಆದರೆ ಪ್ರತಿಫಲವೇನು? ಕೇಳಬೇಡಿ ಮಾರಾಯಾ! ಇಷ್ಟೆಲ್ಲಾದರೂ ನಾವಿದ್ದಲ್ಲೇ ಇದ್ದೇವೆ. ವರ್ಷಕ್ಕೊಮ್ಮೆ ಸಪ್ತಾಹದ ಪರ್ಯಾಯ. ಎಲ್ಲರಿಗೂ ಮೋಜು. ಮತ್ತೇನು ಬೇಕು! ಕೇಳಿ!

ವಿದೇಶಗಳಲ್ಲಿ ಪ್ರವಾಸೋದ್ಯಮಕ್ಕೆ ಪ್ರಾಶಸ್ತ್ಯ ಕೊಡಲಾಗುತ್ತಿದೆ. ಯಾಕೆಂದರೆ ಆಯಾ ದೇಶದ, ಜನರ, ಸಂಸ್ಕೃತಿಯ, ಭೂಗೋಲದ, ಚರಿತ್ರೆಯ ಪರಿಚಯ ಮಾಡಿಕೊಡುವ ಖಾತೆ ಪ್ರವಾಸೋದ್ಯಮ. ಪರದೇಶದವರಿಗೆ ನಮ್ಮ ದೇಶದ ಹಿಂದಿನ ವೈಭವ, ಕಲೆ, ಸಂಸ್ಕೃತಿಯ ತಿಳುವಳಿಕೆ ಸಿಗಬೇಕು. ಅದಕ್ಕಾಗಿ, ವಿದೇಶೀಯರನ್ನೂ, ದೇಶೀಯರನ್ನೂ ಆಕರ್ಷಿಸುವ ವ್ಯವಸ್ಥೆ, ಬರುವವರಿಗೆ ಸೌಕರ್ಯಗಳೆಲ್ಲ ಬೇಕು. ಸರಕಾರ ಅದರ ಜವಾಬ್ದಾರಿ ವಹಿಸಬೇಕು.

ಪರರಾಷ್ಟ್ರಗಳಂತೆ ನಮ್ಮ ದೇಶದ ಪ್ರವಾಸೋದ್ಯಮ ವಿದೇಶೀಯರ ಸಲುವಾಗಿಯಷ್ಟೇ ಮಹತ್ವ ಕೊಡುತ್ತಿದೆ. ಇದು ಸರಿಯಲ್ಲ. ವಿದೇಶೀಯರಂತೆ ನಮ್ಮ ನಾಡಿನ ಜನರೂ ನಮ್ಮ ಚರಿತ್ರೆ, ನಡೆ, ನುಡಿ, ಕಲೆ, ಸಂಸ್ಕೃತಿಗಳ ಪರಿಚಯ ಮಾಡಿಕೊಳ್ಳುವುದು ಅತ್ಯಗತ್ಯ. ಈ ದೃಷ್ಟಿಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳೂ, ಇದಕ್ಕೆ ಯೋಗ್ಯಸ್ಥಾನ ನೀಡಿಲ್ಲ. ಆರನೇ ಯೋಜನೆಯಲ್ಲಿ ಕೇಂದ್ರ-ರಾಜ್ಯಗಳಿಗಾಗಿ ಬರೇ ರೂ. 187 ಮೀಸಲಿಡಲಾಗಿದೆ. ನಮ್ಮ ದೇಶಕ್ಕೆ ಬಂದ ವಿದೇಶಿ ಪ್ರವಾಸೋದ್ಯಮಿಗಳು ವಿದೇಶೀ ವಿನಿಮಯ ರೂಪದಲ್ಲಿ ಸುಮಾರು 600 ಕೋಟಿ ವೆಚ್ಚ ಮಾಡಿದ್ದಾರೆ. ಮನುಷ್ಯನಿಗೆ ಕೆಲಸದ ಜೊತೆಯಲ್ಲಿ ವಿರಾಮವೂ ಅಗತ್ಯ. ಆ ದಿಸೆಯಲ್ಲಿ ನೋಡಿದರೆ ಈಗಿನ ಕಾಲದಲ್ಲಿ ಪ್ರತಿಯೊಬ್ಬನೂ ಪ್ರವಾಸ ಪ್ರಿಯಕರನಾಗಿದ್ದಾನೆ. ಕಾರಣ ಸರಕಾರ ಬರೇ ಸಪ್ತಾಹವನ್ನಷ್ಟೇ ವರ್ಷಕ್ಕೊಮ್ಮೆ ಆಚರಿಸಿ "ವಿಧಿ" ಮುಗಿಸಿದರೆ ಸಾಲದು. ಪ್ರವಾಸಿಗಳಿಗೆ ವಾಹನ, ಸಂಚಾರ, ವಸತಿ, ಗೈಡ್ ಸೌಕರ್ಯಗಳನ್ನೂ ಒದಗಿಸುವುದು ಅತ್ಯಗತ್ಯ.

ಕರ್ನಾಟಕದ ಪ್ರವಾಸೋದ್ಯಮ ಪುಸ್ತಕದಲ್ಲಿ ಗೋಳುಗುಮ್ಮಟವೇ ನಾಪತ್ತೆಯಂತೆ. ಹಾಗೆಯೇ ಭಾರತ ಸರಕಾರ ಕೂಡ ಪ್ರವಾಸೋದ್ಯಮಿಗಳಿಗೆ ಕರ್ನಾಟಕದ ಚರಿತ್ರಾರ್ಹ ಸ್ಥಳ ಪರಿಚಯಮಾಡಿಕೊಡುವಲ್ಲಿ ಹಿಂದೇಟು ಹಾಕಿದೆ. ಇದನ್ನು ಸರಿಪಡಿಸುವುದಗತ್ಯ.

ರಷ್ಯಾ, ಚೀನಾ ಮೊದಲಾದ ಸಮತಾವಾದಿ ದೇಶಗಳಲ್ಲಿ ಪ್ರವಾಸೋದ್ಯಮಕ್ಕೆ, ಪ್ರಚಾರ ಮಾಧ್ಯಮಕ್ಕೆ ಮಹತ್ವ ಕೊಡುತ್ತಾರೆ. ಈ ವೃತ್ತಿಯಲ್ಲಾದರೂ ನಮ್ಮ ಕೇಂದ್ರ-ರಾಜ್ಯ ಸರಕಾರಗಳು ಸಮತಾವಾದಿ ದೇಶಗಳನ್ನು ಅನುಸರಿಸಿದ್ದಾದರೆ, ನಮ್ಮ ಜನಕ್ಕೂ ದೇಶಕ್ಕೂ ಒಳಿತು.

○

ಎಸ್. ಎಫ್. ಐ. ಉದ್ಘಾಟನೆ

9-11-81ರಂದು ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿರುವ ಸರಕಾರಿ ಜ್ಯೂನಿಯರ್ ಕಾಲೇಜಿನಲ್ಲಿ ಎಸ್. ಎಫ್. ಐ. ಘಟಕದ ಉದ್ಘಾಟನೆ ನಡೆಯಿತು. ಈ ಸಮಾರಂಭಕ್ಕೆ ಕಾಲೇಜಿನ ವಿದ್ಯಾರ್ಥಿ ಪ್ರತಿನಿಧಿಗಳು ಆಗಮಿಸಿದ್ದರು. ಸಭೆಗೆ ಆಗಮಿಸಿದ್ದ ಎಸ್.ಎಫ್.ಐ. ರಾಜ್ಯಸಮಿತಿಯ ಸದಸ್ಯ ಕಾಂ. ಕೆ. ಬಸವರಾಜರು ಎಸ್. ಎಫ್. ಐ. ಧ್ಯೇಯೋದ್ದೇಶಗಳನ್ನು ವಿವರಿಸಿದರು.

ನೂತನ ಎಸ್.ಎಫ್.ಐ. ಘಟಕದ ಸಂಚಾಲಕರಾಗಿ ಚಂದ್ರಶೇಖರ, ಸಹಸಂಚಾಲಕರಾಗಿ ನರಸಿಂಹ ಮತ್ತು ಶಿವಶಂಕರ್, ಖಜಾಂಚಿಯಾಗಿ ಶೌಕತ್ ಅಲಿ ಹಾಗೂ 12 ಕಾರ್ಯಕಾರಿ ಸಮಿತಿ ಸದಸ್ಯರು ಚುನಾಯಿತರಾಗಿದ್ದಾರೆ.

ಹೈಸ್ಕೂಲ್ ವಿದ್ಯಾರ್ಥಿಗಳ ಸಭೆ ನಡೆದು ಹೈಸ್ಕೂಲು ಮಟ್ಟದಲ್ಲಿ ಎಸ್. ಎಫ್.ಐ. ಘಟಕ ಪ್ರಾರಂಭಿಸಲಾಯಿತು. ಈ ಹೈಸ್ಕೂಲು ಸಮಿತಿಯಲ್ಲಿ ಕಾಶೀನಾಥ, ಗಾಯಿತ್ರಿ, ಮೀನಾಕ್ಷಿ, ಖ್ವಾಜಾಹುಸೇನ್, ಮಂಜುಳ ಮತ್ತು ಅಮರೇಗೌಡ ಇವರುಗಳು ಇದ್ದಾರೆ.

●

ಜನವರಿ 26 ರಿಂದ 31ರವರೆಗೆ ಪಕ್ಷದ ಅಖಿಲಭಾರತ ಅಧಿವೇಶನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಅಕ್ಟೋಬರ 27ರಿಂದ 31ರವರೆಗೆ ದೆಹಲಿಯಲ್ಲಿ ಸಭೆಸೇರಿ ರಾಜಕೀಯ ನಿರ್ಣಯಗಳ ಕರಡು ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು. ಪಾರ್ಟಿ ಘಟಕಗಳಲ್ಲಿ ಈ ಕರಡು ವರದಿಯ ಚರ್ಚೆ ನಡೆಸಿ ಸಲಹೆ ತಿದ್ದುಪಡಿಗಳನ್ನು ಕೇಂದ್ರಸಮಿತಿಗೆ ತಿಳಿಸಬಹುದು.

ಆಂಧ್ರಪ್ರದೇಶದ ವಿಜಯವಾಡದಲ್ಲಿ 1982ರ ಜನವರಿ 26ರಿಂದ 31ರ ವರೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಖಿಲ ಭಾರತ ಅಧಿವೇಶನ ನಡೆಸಲು ತೀರ್ಮಾನಿಸಲಾಗಿದೆ.

267,232 ಸದಸ್ಯರನ್ನು ಪ್ರತಿನಿಧಿಸುವ 548 ಪ್ರತಿನಿಧಿಗಳು ಅಧಿವೇಶನದಲ್ಲಿ ಪಾಲ್ಗೊಳ್ಳಲಿದ್ದಾರೆ.

○

ತೀವ್ರ ಭೂಸುಧಾರಣೆ ಇನ್ನೂ ಪ್ರಮುಖ ಪ್ರಶ್ನೆ

(3ನೇ ಪುಟದಿಂದ)

ತ್ವವಾದೀ ಸಾಮಾಜಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಕನಸು ಕಾಣುತ್ತಿರುವುದು ನಿಜಕ್ಕೂ ಒಂದು ದುರಂತ.

ಭೂಸುಧಾರಣಾ ವಿರೋಧಿ

1948-51ರಲ್ಲಿ ತೆಲಂಗಾಣಾದಲ್ಲಿ ಬೆಳೆಯುತ್ತಿದ್ದ ಕ್ರಾಂತಿಕಾರೀ ಕೃಷೀ ಚಳುವಳಿಯನ್ನು ನಾಶಗೊಳಿಸಲು ತನ್ನ ಶಕ್ತ್ಯನುಸಾರ ಏನು ಸಾಧ್ಯವೋ ಅವೆಲ್ಲಾವನ್ನು ಮಾಡಿದ ಆಳುವ ಕಾಂಗ್ರೆಸ್ ಪಕ್ಷ ಅಲ್ಲಿಗೇ ನಿಲ್ಲಲಿಲ್ಲ. ಈ ಮೂವತ್ತು ವರ್ಷಗಳಲ್ಲಿ ತೆಲಂಗಾಣಾ ಚಳುವಳಿಯ ಸಾಧನೆಗಳನ್ನು ವಿಫಲಗೊಳಿಸುವಲ್ಲಿ ಹಾಗೂ ಆ ಪ್ರದೇಶದಲ್ಲಿ ರೈತ ಚಳುವಳಿಯನ್ನು ಮಟ್ಟಲೋಚ್ಚಾಟನೆ ಮಾಡುವಲ್ಲಿ ಅದು ನಿರತವಾಗಿದೆ. ಪೋಲೀಸ್ ಹಾಗೂ ಭೂಮಾಲಕರ ಗೂಂಡಾಗಳು ನೂರಾರು ರೈತರು ಹಾಗೂ ಬೇಸಾಯ ಕೂಲಿಕಾರರನ್ನು ಕೊಂದಿದ್ದಾರೆ. ಸಾವಿರಾರು ರೈತ ಕಾರ್ಯಕರ್ತರನ್ನು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಿಲುಕಿಸಲಾಗಿದೆ. ಇತ್ತೀಚೆಗೆ ವಾರಂಗಲ್ ಹಾಗೂ ನಲ್‌ಗೊಂಡಾ ಜಿಲ್ಲೆಗಳಲ್ಲಿ ಭೂಮಾಲಿಕರು, ಹಾಗೂ ಕಾಂಗ್ರೆಸ್ (ಐ)ಜನ ಸಿ. ಪಿ. ಐ.(ಎಂ)ನ ಹಲವು ಕಾರ್ಯಕರ್ತರ ಮೇಲೆ ದಾಳಿ ನಡೆಸಿ ಕೊಲೆಮಾಡಿದ್ದಾರೆ ಕ್ರಿಮಿನಲ್ ಕೆಲಸಕ್ಕೆ ಅವರು ಕೆಲವೊಮ್ಮೆ ನಕ್ಸಲೀಯರನ್ನು ಬಳಸಿಕೊಂಡಿದ್ದಾರೆ. ತೆಲಂಗಾಣಾ ಹೋರಾಟದ ಒಬ್ಬ ನಾಯಕರಾದ ಹಾಗೂ ರಾಜ್ಯ ವಿಧಾನ ಸಭೆಯಲ್ಲಿ ಹುಜೂರ್ ನಗರವನ್ನು ಪ್ರತಿನಿಧಿಸುವ ಸಿ. ಪಿ. ಐ. (ಎಂ) ನಾಯಕ ಎಂ. ಓಂಕಾರ್‌ರವರ ಮೇಲೆ ಹಲವು ಬಾರಿ ಹಲ್ಲೆ ಪ್ರಯತ್ನ ನಡೆದಿವೆ. ಕಳೆದೆರಡು ವರ್ಷಗಳಲ್ಲೇ ಮೂವತ್ತು ಸಿ. ಪಿ. ಐ. (ಎಂ)ಕಾರ್ಯಕರ್ತರ ಕೊಲೆಯಾಗಿದೆ, 200 ಜನರನ್ನು ಹಿಂಸೆಗೆ ಗುರಿಪಡಿಸಿ ಅಂಗವಿಕಲಗೊಳಿಸಲಾಗಿದೆ, 15 ಲಕ್ಷ ರೂ. ಬೆಲೆಬಾಳುವ ಆಸ್ತಿಯನ್ನು ಲೂಟಿಮಾಡಿದ್ದಾರೆ ಹಾಗೂ ನೂರಾರು ಜನರ ವಿರುದ್ಧ ಮೊಕದ್ದಮೆಗಳನ್ನು ಹೂಡಿದ್ದಾರೆ. ಅಲ್ಲದೆ ಕಾಂಗ್ರೆಸ್ ಜಾಗೀರದಾರರ, ದೇಶಮುಖರ, ಇನಾಂದಾರರ, ಬಂಜಾರ್‌ದಾರರ ಹಾಗೂ ಮಕ್ತೇದಾರರ ಹೊಸ ಹೊಚ್ಚಹೊಸ ನಮೂನೆಯನ್ನು ಈ ಪ್ರದೇಶದಲ್ಲಿ ಸೃಷ್ಟಿಸಲಾಗಿದೆ. ಈ ದೊಡ್ಡ ಸಾಮಾಜಿಕ ಮಹಾಪರಾಧದಲ್ಲಿ ಆಳುವ ಕಾಂಗ್ರೆಸ್ಸಿನ ನಾಯಕರಾಗಿ ಶ್ರೀಮತಿ ಗಾಂಧಿಯವರದ್ದು ಅತೀ ದೊಡ್ಡ ಪಾಲಿದೆ.

1959ರಲ್ಲಿ ಕೇರಳದ ಕಮ್ಯುನಿಸ್ಟ್ ನೇತೃತ್ವದ ಸರಕಾರವನ್ನು ಉರುಳಿಸುವ ಉದ್ದೇಶದಿಂದ ನಡೆದ "ವಿಮೋಚನಾ ಸಮರ"ವನ್ನು ಸಂಘಟಿಸಿ, ನಡೆಸಿದ ಪ್ರೇರಣಾಶಕ್ತಿಯಾಗಿದ್ದರು ಶ್ರೀಮತಿ ಇಂದಿರಾಗಾಂಧಿ. ಈ ಕಮ್ಯುನಿಸ್ಟ್ ವಿರೋಧೀ ಅಪವಿತ್ರ ಹೋರಾಟಕ್ಕೆ ಕಾಂಗ್ರೆಸ್‌ಪಕ್ಷ ರಾಜ್ಯದ ಎಲ್ಲಾ ಜಾತೀವಾದಿ, ಕೋಮುವಾದಿ ಹಾಗೂ ಬದ್ಧ ಕಮ್ಯುನಿಸ್ಟ್ ವಿರೋಧೀ ಶಕ್ತಿಗಳನ್ನು ಒಂದುಗೂಡಿಸಲು ಪ್ರಯತ್ನಿಸಿತು. ಕೇರಳದ ಆ ಕಮ್ಯುನಿಸ್ಟ್ ಸರಕಾರದ ಪ್ರಮುಖ ಅಪರಾಧವಾದರೂ ಏನು? ದಲಿತ ರೈತಾಪಿವರ್ಗದ ಪರವಾಗಿ ಕೆಲವು ಭೂಸುಧಾರಣಾ ಕ್ರಮಗಳನ್ನು ರೂಪಿಸಿ ಜಾರಿಗೆ ತರಲು ಪ್ರಯತ್ನಿಸಿದ್ದಷ್ಟೇ ಅದರ ಅಪರಾಧ. ಬೇರೇನೂ ಅಲ್ಲ.

1967-69ರಲ್ಲಿ ಪಶ್ಚಿಮ ಬಂಗಾಳದ ಸಂಯುಕ್ತರಂಗ ಸರಕಾರ ಹಾಗೂ ಕೇರಳದ ಕಮ್ಯುನಿಸ್ಟ್ ನೇತೃತ್ವದ ಸರಕಾರವನ್ನು ಉರುಳಿಸಲು ತನಗೆ ಸಾಧ್ಯವಿದ್ದುದನ್ನೆಲ್ಲಾ ಮಾಡಿದವರೂ ಕೂಡಾ ಕಾಂಗ್ರೆಸ್‌ನ ನಾಯಕಿ ಹಾಗೂ ದೇಶದ ಪ್ರಧಾನ ಮಂತ್ರಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರೇ. ಕೆಲವು ಕೃಷೀ ಸುಧಾರಣೆಗಳನ್ನಾರಂಭಿಸಿ ರೈತಾಪಿವರ್ಗಕ್ಕೆ ಅನುಕೂಲವಾಗುವಂತೆ ಆಗಲೇ ಇದ್ದ ಭೂಶಾಸನಗಳನ್ನು ಜಾರಿಗೆ ತರಲು ಪ್ರಾಮಾಣಿಕ ಪ್ರಯತ್ನ ನಡೆಸಿದ್ದೇ ಈ ಎರಡು ಸರಕಾರಗಳು ಮಾಡಿದ ಮಹಾಪರಾಧ. 1972ರ ಪಶ್ಚಿಮ ಬಂಗಾಳದ ವಿಧಾನ ಸಭಾ ಚುನಾವಣೆಗಳಲ್ಲಿ ಸಾರಾಸಗಟು ಮೋಸದ ತಂತ್ರಗಳನ್ನುಪಯೋಗಿಸಿ ಆ ಮೇಲೆ ಕಿಸಾನ್ ಕಾರ್ಯಕರ್ತರು ಹಾಗೂ ಸಿ. ಪಿ. ಐ. (ಎಂ)ಕಾರ್ಯಕರ್ತರ ಮೇಲೆ ಗೂಂಡಾ ಪಡೆಗಳನ್ನು ಛೂಬಿಟ್ಟು ಪ. ಬಂಗಾಳದಲ್ಲಿ 1200 ಜನ ಹಾಗೂ ಕೇರಳದಲ್ಲಿ 300 ಕಾರ್ಯಕರ್ತರ ಕೊಲೆ ಮಾಡುವ ಕೆಲಸಗಳಿಗೆ ನಾಯಕತ್ವ ಒದಗಿಸಿದವರೂ ಶ್ರೀಮತಿಗಾಂಧಿಯವರೇ. ಈ ಎಲ್ಲಾ ಸಮಯದಲ್ಲಿ ಸಿ. ಪಿ. ಐ. (ಎಂ) ರಾಜಕೀಯ ಕೊಲೆ ನಡೆಸುತ್ತಿದೆ ಎಂಬ ಭಾರೀ ಸುಳ್ಳಿನ ಅಪಪ್ರಚಾರ ನಡೆದೇ ಇತ್ತು.

ಮೂರು ವರ್ಷ ಅಧಿಕಾರದಿಂದ ಹೊರಗಿದ್ದು ಜನವರಿ 1980ರಲ್ಲಿ ಅಧಿಕಾರಕ್ಕೆ ಹಿಂದಿರುಗಿದ ಮರುದಿನದಿಂದಲೇ ಪಶ್ಚಿಮ ಬಂಗಾಳ ಹಾಗೂ ಕೇರಳದ ಎಡಬಲಪಿನ ಸರಕಾರಗಳನ್ನು ಬಂಗಾಳಕೊಲ್ಲಿ ಹಾಗೂ ಅರಬೀ ಸಾಗರದಲ್ಲಿ ಮುಳುಗಿಸುತ್ತೇವೆಂದು ಪ್ರಚಾರ ಆರಂಭಿಸಿದ ಕೀರ್ತಿಯೂ ಶ್ರೀಮತಿ ಗಾಂಧಿ ಮತ್ತು ಅವರ ಪಕ್ಷಕ್ಕೇ ಸಲ್ಲುತ್ತದೆ. ಪಶ್ಚಿಮ ಬಂಗಾಳ ಹಾಗೂ ಕೇರಳದ ಸರಕಾರಗಳು ರೂಪಿಸಿದ ಹಲವು ಕೃಷಿ ಸಂಬಂಧೀ ಹಾಗೂ ಜನಪ್ರಿಯ ಶಾಸನಗಳು ಬಹಳ ಸಮಯದಿಂದ ರಾಷ್ಟ್ರಪತಿಗಳ ಒಪ್ಪಿಗೆಯಾಗಿ ಕಾಯುತ್ತಿವೆ.

ಈಗಲೂ ಮುಖ್ಯ ಪ್ರಶ್ನೆ

ಕಾಂಗ್ರೆಸ್ ಆಳ್ವಿಕೆಯ ರಾಜ್ಯಗಳಲ್ಲಿ ಹರಿಜನರ, ಗೇಣಿದಾರರ ಹಾಗೂ ಬೇಸಾಯ ಕೂಲಿಗಾರರ ಮೇಲೆ ಭೂಮಾಲಕರ ಪ್ರಾಣಘಾತಕ ಹಲ್ಲೆಗಳು ನಡೆಯುತ್ತಿರುವುದು ದಿನನಿತ್ಯದ ಸಂಗತಿಗಳಾಗಿವೆ. ಹರಿಜನರನ್ನು, ಗಿರಿಜನರನ್ನು, ಅಲ್ಪಸಂಖ್ಯಾತರನ್ನು ರಕ್ಷಿಸುವ ಮಾತು ಕೇವಲ ವಂಚನೆಯಾಗಿದೆ.

35ವರ್ಷಗಳ ಹಿಂದೆ ತೆಲಂಗಾಣಾದಲ್ಲಿನ ಐದು ವರ್ಷಗಳ ಸಶಸ್ತ್ರ ಸ್ಥಳೀಯ ಹೋರಾಟ ಭಾರತದ ರಾಜಕೀಯ ವಲಯದಲ್ಲಿ ಕೃಷಿ ಕ್ರಾಂತಿಯ ಪ್ರಶ್ನೆಯನ್ನು ಪ್ರಮುಖ ಪ್ರಶ್ನೆಯಾಗಿ ಒಡ್ಡಿತು. ಈಗಲೂ ಅದು ಭಾರತದ ಕ್ರಾಂತಿಯ ಕೇಂದ್ರ ಪ್ರಶ್ನೆಯೇ ಆಗಿ ಉಳಿದಿದೆ. ರೈತಾಪಿ ವರ್ಗಕ್ಕೆ ಅನುಕೂಲವಾಗುವ ತೀವ್ರ ಕೃಷಿ ಸುಧಾರಣೆ ಕ್ರಮಗಳನ್ನು ಮರೆತು ರಾಷ್ಟ್ರೀಯ ಪ್ರಗತಿ ಹಾಗೂ ರಾಷ್ಟ್ರೀಯ ಐಕ್ಯತೆಯ ಬಗ್ಗೆ ಕಾಂಗ್ರೆಸ್ ಆಳರಸರು ಹೇಳುವ ಯಾವುದೇ ಮಾತು ನಿರರ್ಥಕ ಹಾಗೂ ಮೋಸದ್ದು. ತನ್ನ ಕಾರ್ಯಕ್ರಮದಲ್ಲಿ ಕ್ರಾಂತಿಕಾರೀ ಕೃಷಿ ಸುಧಾರಣೆಗಳನ್ನು ಪ್ರಮುಖ ಹಾಗೂ ಕೇಂದ್ರ ವಿಷಯವನ್ನಾಗಿಟ್ಟುಕೊಂಡಿರದ ಯಾವುದೇ ರಾಷ್ಟ್ರೀಯ ಪರ್ಯಾಯದ ಮಾತೂ ಕೂಡಾ ಅಷ್ಟೇ ಅರ್ಥಹೀನ.

ತೆಲಂಗಾಣಾ ರೈತರ ಸಶಸ್ತ್ರ ದಂಗೆ ಹಾಗೂ ಐದು ವರ್ಷಗಳ ವ್ಯಾಪಕ ಹಾಗೂ ಧೀರ ಪ್ರತಿಭಟನೆಯ ನಂತರ 1951ರ ಅಕ್ಟೋಬರ್ 21ರಂದು ಅದನ್ನು ವಾಪಸು ಪಡೆದುದನ್ನು ಸ್ಮರಿಸಿಕೊಳ್ಳುವಾಗ ಆ ಮಹಾನ್ ತೆಲಂಗಾಣಾ ಹೋರಾಟದಲ್ಲಿ ಭಾರತದ ಬೇಸಾಯ ಕ್ರಾಂತಿಯ ಮಹಾನ್ ಉದ್ದೇಶಕ್ಕಾಗಿ ತಮ್ಮ ಪ್ರಾಣಗಳನ್ನು ಬಲಿದಾನಗೈದ ಹುತಾತ್ಮರಿಗೆ ನಮ್ಮ ನಮನಗಳು. ○

ಕುಂದಾಪುರದಲ್ಲಿ ಆಕರ್ಷಣೀಯ ರ್‍ಯಾಲಿ

(1ನೇ ಪುಟದಿಂದ)

ಯೇಟ್ ಸದಸ್ಯರಾದ ಶ್ರೀ ಸಿ. ನಂಜುಂಡಪ್ಪನವರೂ ಸಮ್ಮೇಳನದಲ್ಲಿ ಉಪಸ್ಥಿತರಿದ್ದು ಮಾರ್ಗದರ್ಶನ ನೀಡಿದರು.

ಶ್ರೀ ಬಿ ನಾರಾಯಣ, ಶ್ರೀ ಬಿ. ಮಾಧವ ಮತ್ತು ಶ್ರೀ ಕೆ. ಸೂರ್ಯನಾರಾಯಣ ಭಟ್ ಇವರನ್ನೊಳಗೊಂಡ ಅಧ್ಯಕ್ಷ ಮಂಡಳಿಯು ಸಮ್ಮೇಳನದ ಕಲಾಪಗಳನ್ನು ನಡೆಸಿತು.

ಜಿಲ್ಲಾ ಸಮಿತಿಯ ಕಾರ್ಯದರ್ಶಿ ಶ್ರೀ ಕೆ. ಆರ್. ಶ್ರೀಯಾನ್ ಅವರು ಮಂಡಿಸಿದ ವರದಿಯಮೇಲೆ ಸುದೀರ್ಘ ಚರ್ಚೆ ನಡೆದು, ಕೆಲವು ತಿದ್ದುಪಡಿಗಳೊಂದಿಗೆ ವರದಿಯನ್ನು ಅಂಗೀಕರಿಸಲಾಯಿತು.

ಅವಶ್ಯಕ ಸೇವಾ ಕಾನೂನು ರಾಷ್ಟ್ರೀಯ ಭದ್ರತಾ ಕಾನೂನು, ಬೆಲೆ ಏರಿಕೆ ಮತ್ತು ನಿರುದ್ಯೋಗದ ವಿರುದ್ಧ ಠರಾವುಗಳನ್ನು ಅಂಗೀಕರಿಸಲಾಯಿತು. ಪುರಸಭೆಗಳು ಮತ್ತು ಮಹಾನಗರ ಪಾಲಿಕೆಗಳಿಗೆ ಅಧ್ಯಕ್ಷರು ಮತ್ತು ಮೇಯರರನ್ನು ಸರಕಾರವು ನೇಮಕ ಮಾಡುವುದನ್ನು ಪ್ರಬಲವಾಗಿ ಪ್ರತಿಭಟಿಸಿದ ಸಮ್ಮೇಳನವು ಈ ಸಂಸ್ಥೆಗಳಿಗೆ ಕೂಡಲೇ ಚುನಾವಣೆಗಳನ್ನು ನಡೆಸಬೇಕೆಂದು ಸರಕಾರವನ್ನು ಒತ್ತಾಯಿಸಿತು. ರಾಜ್ಯ ಮಂತ್ರಿಮಂಡಲದ ಸಭೆಗಳನ್ನು ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ನಡೆಸಿ ತಮ್ಮ ವೈಭವವನ್ನು ಮೆರೆಸುವ ಮೂಲಕ ಸರಕಾರದ ಹಣವನ್ನು ಪೋಲು ಮಾಡುವ ಕರ್ನಾಟಕ ಸರಕಾರದ ಕ್ರಮವನ್ನು ಸಮ್ಮೇಳನವು ಖಂಡಿಸಿತು. ಕನ್ನಡವನ್ನೂ ರಾಜ್ಯದ ಪ್ರಥಮ ಭಾಷೆಯನ್ನಾಗಿ ಮಾಡಬೇಕೆಂದು ಶಿಫಾರಸು ಮಾಡಿರುವ ಗೋಕಾಕ್ ಸಮಿತಿಯ ವರದಿಯನ್ನು ಕೂಡಲೇ ಅಂಗೀಕರಿಸಬೇಕೆಂದು ಸಮ್ಮೇಳನವು ಸರಕಾರವನ್ನು ಒತ್ತಾಯಿಸಿತು. ರೈತರ ಸಮಸ್ಯೆಗಳ ಕುರಿತು ಸಮ್ಮೇಳನವು ವಿವರವಾಗಿ ಚರ್ಚೆ ನಡೆಸಿ ಅವುಗಳ ಪರಿಹಾರಕ್ಕಾಗಿ ಹೋರಾಟ ನಡೆಸಲು ತೀರ್ಮಾನಿಸಿತು. ಭೂನ್ಯಾಯ ಮಂಡಳಿಗಳಲ್ಲಿ ನಡೆಯುತ್ತಿರುವ ಅನ್ಯಾಯ ಮತ್ತು ಭ್ರಷ್ಟಾಚಾರಗಳ ವಿರುದ್ಧ ಹೋರಾಟ ನಡೆಸಲು ತೀರ್ಮಾನಿಸಲಾಯಿತು. ರಾಜ್ಯದ ಜನಸಾಮಾನ್ಯರ ಸಮಸ್ಯೆಗಳನ್ನು ಚರ್ಚಿಸಿ ಹೋರಾಟದ ಕಾರ್ಯಕ್ರಮಗಳನ್ನು ರೂಪಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಸಿ.ಪಿ.ಐ.ಯ ರಾಜ್ಯ ಸೆಕ್ರೆಟಾರಿಯೇಟ್‌ಗಳು ಜಂಟಿ ಸಮಾವೇಶ ನಡೆಸಲು ತೀರ್ಮಾನಿಸಿರುವುದನ್ನು ಸ್ವಾಗತಿಸಿದ ಸಮ್ಮೇಳನವು ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಸಂಘಟಿಸಲಾಗುವ ಹೋರಾಟಗಳನ್ನು ಯಶಸ್ವಿಗೊಳಿಸಲು ಜಿಲ್ಲೆಯ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವವಾದಿ ರಾಜಕೀಯ ಪಕ್ಷಗಳೂ ಸಹಾಯ ಸಹಕಾರ ನೀಡಬೇಕೆಂದು ಕರೆನೀಡಿತು.

ಅಂತಾರಾಷ್ಟ್ರೀಯ ವಿದ್ಯಮಾನಗಳ ಕುರಿತು ಸಮ್ಮೇಳನವು ಸುದೀರ್ಘ ಚರ್ಚೆ ನಡೆಸಿತು. ಸಾಮ್ರಾಜ್ಯಶಾಹೀ ಅಪಾಯಗಳ ವಿರುದ್ಧ ಸಮ್ಮೇಳನವು ಜನತೆಯನ್ನು ಎಚ್ಚರಿಸಿತು. ಪ್ಯಾಲೆಸ್ಟೀನ್ ಅರಬರ ಹೋರಾಟಕ್ಕೆ ಬೆಂಬಲ ನೀಡುವ ದಕ್ಷಿಣ ಆಫ್ರಿಕಾದಲ್ಲಿ ಮಾನವೀಯ ಹಕ್ಕುಗಳಿಗಾಗಿ ಕರಿಯರು ನಡೆಸುವ ಹೋರಾಟಕ್ಕೆ ಬೆಂಬಲ ನೀಡುವ ಮತ್ತು ಚಿಲಿ ಮತ್ತು ಎಲ್ ಸಾಲ್ವಡೋರ್ ದೇಶಗಳಲ್ಲಿ ಅಮೇರಿಕದ ಹಸ್ತಕ್ಷೇಪವನ್ನು ಖಂಡಿಸುವ ನಿರ್ಣಯಗಳನ್ನು ಸಮ್ಮೇಳನವು ಅಂಗೀಕರಿಸಿತು.

ಬೆಂಗಳೂರಿನ ಬಿನ್ನಿ ಮಿಲ್ಲನ್ನು ಮುಚ್ಚುವುದರ ವಿರುದ್ಧ ಸಮ್ಮೇಳನವು ಪ್ರಬಲವಾಗಿ ಪ್ರತಿಭಟಿಸಿ ಏಳುಸಾವಿರ ಕಾರ್ಮಿಕರನ್ನು ಕೆಲಸದಿಂದ ಹೊರ ಹಾಕಿ ನಿರುದ್ಯೋಗಿಗಳನ್ನಾಗಿ ಮಾಡುವ ಈ ಕ್ರಮವನ್ನು ತಡೆಯಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸಿತು.

ಸಮ್ಮೇಳನದ ಆರಂಭದಲ್ಲಿ ಜಿಲ್ಲೆಯ ಹಿರಿಯ ಮುಂದಾಳು ಶ್ರೀ ಪಿ. ರಾಮಚಂದ್ರರಾಯರು ಧ್ವಜಾರೋಹಣ ಮಾಡಿದರು. ಸ್ವಾಗತಸಮಿತಿಯ ಅಧ್ಯಕ್ಷರಾದ ಶ್ರೀ ಅಬ್ರಹಾಂ ಕರ್ಕಡರು ಸ್ವಾಗತ ಭಾಷಣ ಮಾಡಿದರು.

ಕೊನೆಯಲ್ಲಿ ಅಧ್ಯಕ್ಷ ಮಂಡಳಿಯ ಪರವಾಗಿ ಶ್ರೀ ಬಿ. ಮಾಧವ ಅವರು ಭಾಷಣ ಮಾಡಿದ ನಂತರ ಶ್ರೀ ಸಿ. ನಾರಾಯಣ ಅವರು ವಂದನಾರ್ಪಣೆ ಮಾಡಿದರು.

ಜಿಲ್ಲಾ ಸಮ್ಮೇಳನದ ಅಂಗವಾಗಿ ತಾ. 16ರಂದು ಸಂಜೆಗೆ ಬಹಿರಂಗ ಸಭೆ ನಡೆಯಿತು.

ಕಾರ್ಯದರ್ಶಿಯಾಗಿ ಶ್ರೀ ಕೆ.ಆರ್. ಶ್ರೀಯಾನರನ್ನು ಪುನರಾಯ್ಕೆ ಮಾಡಲಾಯಿತು. ಮತ್ತು 15 ಸದಸ್ಯರ ಜಿಲ್ಲಾ ಸಮಿತಿಯನ್ನು ಆರಿಸಲಾಯಿತು. ●

ಸಂಪಾದಕೀಯ

(1ನೇ ಪುಟದಿಂದ)

ದ. ಕ. ಜಿಲ್ಲೆಯ ರೈತರು ಈಗಾಗಲೇ ಈ ಮಂಡಳಿಗಳ ವಿರುದ್ಧ ಹೋರಾಟ ಆರಂಭಿಸಿದ್ದಾರೆ. ಇದು ಎಲ್ಲಾ ಕಡೆಗೂ ಹರಡುವುದು ಖಂಡಿತ.

ನಮ್ಮ ರಾಜ್ಯದ ರೈತರು ಈಗ ಎಚ್ಚೆತ್ತಿದ್ದಾರೆ. ಮಲಪ್ರಭಾ ರೈತರ ಹೋರಾಟ ರಾಜ್ಯದ ರೈತರಲ್ಲಿ ಹೊಸ ಜಾಗೃತಿಯನ್ನು ತಂದಿವೆ. ವ್ಯವಸಾಯದಲ್ಲಿ ಉತ್ಪಾದನೆಯಾಗುವ ಬೆಳೆಗಳಿಗೆ ನ್ಯಾಯವಾದ ಬೆಲೆಗಳು ದೊರೆಯಬೇಕೆಂದೂ, ರೈತರಿಗೆ ಬೇಕಾದ ಬೀಜ, ಗೊಬ್ಬರ ಮುಂತಾದುವನ್ನು ಕಡಿಮೆ ಬೆಲೆಯಲ್ಲಿ ಒದಗಿಸಬೇಕೆಂದೂ, ಕಡಿಮೆ ಬಡ್ಡಿಯಲ್ಲಿ ಸಾಲ ಸಿಗಬೇಕೆಂದೂ, ನೀರಿನ ತೆರಿಗೆ ಕಡಿಮೆ ಮಾಡಬೇಕೆಂದೂ ಕೃಷಿ ಕೆಲಸಗಾರರ ಕೂಲಿ ಹೆಚ್ಚಾಗಬೇಕೆಂದೂ ಹೋರಾಡುತ್ತಿದ್ದಾರೆ. ಹಾಗೆನೇ ಈ ಭೂನ್ಯಾಯ ಮಂಡಳಿಗಳು ಬದಲಾಗಿ ರೈತರ ಪ್ರತಿನಿಧಿಗಳನ್ನೊಳಗೊಂಡ ಹೊಸ ಮಂಡಳಿಗಳು ರಚನೆಯಾಗಬೇಕೆಂದು ನಡೆಯುವ ರೈತರ ಹೋರಾಟವು ಈ ಹೋರಾಟದ ಭಾಗವಾಗಿದೆ. ಇದು ಪ್ರಜಾಪ್ರಭುತ್ವ ಚಳುವಳಿಯ ತಿರುಳು. ಈ ಹೋರಾಟವನ್ನು ಬಲಪಡಿಸುವುದು ಎಲ್ಲರ ಕರ್ತವ್ಯ. ಇದಕ್ಕೆ ನಮ್ಮ ಬೆಂಬಲವನ್ನು ವ್ಯಕ್ತಪಡಿಸುವುದರೊಂದಿಗೆ ಇದು ಯಶಸ್ವಿಯಾಗಲೆಂದು ಹಾರೈಸುತ್ತೇವೆ. ○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154

EDITOR : M. K. BHAT